# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 289 Issue: 289 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 27.05.2025 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



HAMPI TIMES
PRINT & DIGITAL
Daily NEWS PAPER
To book Classified Display Ad in HAMPI TIMES Please call on
9448633038



Bring your product to local hearts


> ಮನಸ್ಸು ಎಲ್ಲದಕ್ಕೂ ಮೂಲ,
> ಅದನ್ನು ಸರಿಪಡಿಸಿಕೊಳ್ಳದ ಹೊರತು
> ಇನ್ನಾವುದು ಸರಿಯಾಗದು
> – ಡಿ.ವಿ.ಜಿ

## ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ : ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ



ವಿಜಯನಗರ ಜಿಲ್ಲೆಯಲ್ಲಿ 2024–25ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಯಲ್ಲಿ ಶೇ.90 ಕ್ಕೂ ಹೆಚ್ಚಿನ ಅಂಕ ಪಡೆದ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದ್ದು, ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನ ಗೌಡ ತಿಳಿಸಿದ್ದಾರೆ.

ಮೇ 31 ಅರ್ಜಿ ಸಲ್ಲಿಸುವ ಕೊನೆಯ ದಿನ. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತೀ ವರ್ಷ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಸುಮಾರು 10,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ "ಪ್ರತಿಭಾ ಪುರಸ್ಕಾರ" ನೀಡಿ ಸನ್ಮಾನಿಸಲಾಗುತ್ತದೆ. https://ksgeanews,blogspot.com ಗೆ ಅಂಕ ಪಟ್ಟಿ 1.0 ಎಮ್.ಬಿ. ಮೀರದಂತೆ ಕಳಿಸಿಕೊಡಲು ಕೋರಿದೆ. ರಾಜ್ಯ ಸರ್ಕಾರಿ ನೌಕರರ ಸಂಘದ ಸದಸ್ಯರಲ್ಲದವರು ಅರ್ಜಿ ಸಲ್ಲಿಸುವಂತಿಲ್ಲ. ಹೆಚ್ಚಿನ ಮಾಹಿತಿಗಾಗಿ 8050105541, 9845712066, 9113000676 ಸಂಪರ್ಕಿಸಲು ಕೋರಲಾಗಿದೆ.

# ಡೆಂಗ್ಯೂಗೆ ಲಸಿಕೆ ಇಲ್ಲ, ತಡೆಗೆ ಮುನ್ನೆಚ್ಚರಿಕೆಯೊಂದೆ ಮಾರ್ಗ

### ವಿಜಯನಗರ ಜಿಪಂ ಸಿಇಒ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ ಹೇಳಿಕೆ
### ಸುತ್ತಮುತ್ತ ನೀರು ನಿಲ್ಲದಂತೆ ನಿಗಾ ವಹಿಸಿ, ಸಾರ್ವಜನಿಕರ ಸಹಕಾರ ಅತ್ಯಗತ್ಯ



■ ಹಂಪಿ ಟೈಮ್ಸ್ ಹೊಸಪೇಟೆ

ಡೆಂಗ್ಯೂಗೆ ಯಾವುದೇ ಲಸಿಕೆ ಅಥವಾ ಆಂಟಿ–ವೈರಲ್ ಚಿಕಿತ್ಸಾ ಕ್ರಮವಿಲ್ಲ. ಅದರ ತಡೆಗಟ್ಟುವಿಕೆಯೊಂದೇ ನಮಗಿರುವ ಅತ್ಯುತ್ತಮ ಆಯ್ಕೆಯಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಕ್ರಮ್ ಅಲಿ ಷಾ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ, ಸುದ್ದಿಗಾರರೊಂದಿಗೆ ಮಾತನಾಡಿದರು, ಒಂದು ರೋಗ, ಸೋಂಕು, ಕಾಯಿಲೆಯನ್ನು ತಡೆಗಟ್ಟುವಿಕೆಯ ಕೆಲಸ ಕೇವಲ ಸರ್ಕಾರಿ ಇಲಾಖೆಗಳ ಪ್ರಯತ್ನದಿಂದ ಅಸಾಧ್ಯ. ಸಾರ್ವಜನಿಕರ ಸಹಕಾರ ಹಾಗೂ ಮುಂಜಾಗ್ರತ ಕ್ರಮಗಳ ಪಾಲನೆಯಿಂದ ಮಾತ್ರ ಸಾಧ್ಯವಾಗಲಿದೆ. ಡೆಂಗ್ಯೂ ಸೋಂಕು, ಈಡಿಸ್ ಸೊಳ್ಳೆಗಳು ಹಗಲು ಕಚ್ಚುವುದರಿಂದ ಉಂಟಾಗುವ ವೈರಸ್ ರೋಗವಾಗಿದ್ದು, ನಿಂತ ನೀರಿನಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ ಮತ್ತು ಅದರ ಜೀವನ ಚಕ್ರವನ್ನು ಪೂರ್ಣಗೊಳಿಸಲು 7–12 ದಿನಗಳನ್ನು ತೆಗೆದುಕೊಳ್ಳುತ್ತದೆ. ಡೆಂಗ್ಯೂ ಸೋಂಕಿಗೆ ಒಳಗಾಗಿದ್ದರೆ ಅದು ಮಾರಕ ಎಂದು ಸಾಬೀತಾಗಿದೆ. ಸೂಕ್ತ ಮುಂಜಾಗೃತಾ ಕ್ರಮಗಳನ್ನು ತೆಗೆದುಕೊಂಡರೆ ಇದನ್ನು ತಡೆಗಟ್ಟಬಹುದಾಗಿದೆ. ಇದೀಗ ಮಳೆಗಾಲ ಆರಂಭವಾದ್ದರಿಂದ ಸೊಳ್ಳೆಗಳ ಸಂತಾನೋತ್ಪತ್ತಿ ಕಾಲವಾಗಿದೆ. ಕಲುಷಿತ ನೀರು ನಿಲ್ಲದಂತೆ, ಗುಂಡಿಗಳಲ್ಲಿ ನೀರು ಸಂಗ್ರಹವಾಗದಂತೆ, ನಿಗದಿತ ಬಳಕೆಗೆ ನೀರನ್ನು ಬದಲಿಸುವಂತೆ, ಜನರು ನಿಗಾವಹಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಿದೆ. ಹಾಗಾದಾಗ ಮಾತ್ರ ಡೆಂಗ್ಯೂ ನಿಯಂತ್ರಣ ಸಾಧ್ಯವಾಗಲಿದೆ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಶಂಕರನಾಯ್ಕ ಮಾತನಾಡಿ, ಹಿಂದಿನ ವರ್ಷದಲ್ಲಿ 314 ಡೆಂಗಿ ಜ್ವರದ ಪ್ರಕರಣಗಳು ಪತ್ತೆಯಾಗಿದ್ದವು, ಯಾವುದೇ ಪ್ರಾಣಹಾನಿ ಆಗಿಲ್ಲ. ಈ ವರ್ಷ ಆರಂಭಿಕವಾಗಿ 14 ಪ್ರಕರಣಗಳು ಪತ್ತೆಯಾಗಿವೆ. ರೋಗಿಗಳು ಆಸ್ಪತ್ರೆಗೆ ದಾಖಲಾಗಿಲ್ಲ. ಡೆಂಗ್ಯೂ ಜ್ವರ ಸೋಂಕಿತರು ಸುರಕ್ಷಿತವಾಗಿದ್ದಾರೆ. ಇನ್ನಷ್ಟು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಡೆಂಗಿ ದಿನಾಚರಣೆಗೆ ಮಾನವ ಸರಪಳಿ ನಿರ್ಮಿಸಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಲಾಗಿದೆ. ಯಾವದೇ ಜ್ವರಗಳು ಕಂಡು ಬಂದರೆ ಸಮೀಪದ ಆಸ್ಪತ್ರೆಗೆ ತೆರಳಿ ಚಿಕಿತ್ಸೆಗೆ ಮುಂದಾಗಿ ನಿರ್ಲಕ್ಷ್ಯ ಬೇಡ. ಎಲ್ಲಾ ಜ್ವರಗಳು ಡೆಂಗ್ಯೂ ಆಗಿರುವುದಿಲ್ಲ. ಪತ್ತೆಯಾದರೇ ಚಿಕಿತ್ಸೆ ಪಡೆಯಲು >>4

## ಇಂದು ಶ್ರೀ ಶನೇಶ್ವರ ಜಯಂತಿ



ಶ್ರೀ ಶನೇಶ್ವರ ಜಯಂತಿ, ಅಮವಾಸ್ಯೆ ನಿಮಿತ್ತ ಸೋಮವಾರ ರಾತ್ರಿ ಶ್ರೀ ಶನಿದೇವರ ಪುರಾಣ ಪ್ರವಚನ–ಭಜನೆ ಜರುಗಿದವು, ಭಕ್ತರು ಇದ್ದರು.

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಹೊರವಲಯದ ಪಂಚಾಚಾರ್ಯನಗರದಲ್ಲಿರುವ ಶ್ರೀಶನೇಶ್ವರ ದೇವಸ್ಥಾನದಲ್ಲಿ ದೇವಸ್ಥಾನ ಸಮಿತಿಯಿಂದ ಮೇ 27 ರಂದು ಶ್ರೀ ಶನೇಶ್ವರ ಜಯಂತಿ ನಿಮಿತ್ತ ಬೆಳಿಗ್ಗೆ ಶ್ರೀಸ್ವಾಮಿಗೆ ವಿಶೇಷ ಪೂಜೆ, ತೈಲಾಭಿಷೇಕ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಪುಷ್ಪಲಂಕಾರ ನೆರವೇರಿಸಲಾಗುತ್ತದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಹಾಲನಗೌಡ ತಿಳಿಸಿದ್ದಾರೆ.

ಬೆಳಿಗ್ಗೆ 5ಕ್ಕೆ ಶ್ರೀ ಸ್ವಾಮಿಯ ಉತ್ಸವ ಮೂರ್ತಿಯೊಂದಿಗೆ ತುಂಗಭದ್ರಾ ಜಲಾಶ ಯದ ಹಿನ್ನೀರಿನ ಗಂಗಾಸ್ಥಳಕ್ಕೆ ತೆರಳಿ ಗಂಗಾ ಪೂಜೆ ನೆರವೇರಿಸಲಾಗುವುದು. ನಂತರ ಜಾನಪದ ಕಲಾ ತಂಡ, ಸಮಾಳ, ನಂದಿಕೋಲು, ವಾದ್ಯ ಸಂಗೀತಗೊಂದಿಗೆ ದೇವಸ್ಥಾನಕ್ಕೆ ಮರಳಲಾಗುತ್ತದೆ. ದೇವಸ್ಥಾನದಲ್ಲಿರುವ ಶ್ರೀ ವಿಘ್ನೇಶ್ವರ, ಶ್ರೀ ಶಾಂತಲಿಂಗೇಶ್ವರ, ಜೇಷ್ಠಾದೇವಿ, ಶಾಂಭವಿಮಾತೆ, ಶ್ರೀ ನಂದಿ, ನವಗ್ರಹ ಹಾಗೂ ಕಾಳಿಕಾ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಪೂಜಾನಂತರ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.


ಹಂಪಿ ಟೈಮ್ಸ್ ಪ್ರಿಂಟ್ & ಡಿಜಿಟಲ್ ನ್ಯೂಸ್ ಪೇಪರ್
ಸುದ್ದಿ, ಪ್ರಕಟಣೆ, ಜಾಹೀರಾತಿಗಾಗಿ
ಸಂಪರ್ಕಿಸಿ: M:9448633038



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

HAMPI TIMES
Print & Digital Kannada Daily

ಪರಿಸರ ಬೆಳೆಸಿ ಮಕ್ಕಳ ಭವಿಷ್ಯಕ್ಕೆ ಬೆಳಕಾಗಿ

ಪರಿಸರ ಉಳಿಸಿ ಬೆಳೆಸೋಣ ಅಭಿಯಾನಕ್ಕೆ ಪಾಲಕರು ಕೈಜೋಡಿಸಿ, ಭವಿಷ್ಯದ ಮಕ್ಕಳಿಗೆ ಉತ್ತಮ ಆರೋಗ್ಯ ನೀಡಿ

ಶಾಲೆ ಪ್ರವೇಶಿಸುವ ನಿಮ್ಮ ಮಗುವಿನ ಹೆಸರಿನಲ್ಲೊಂದು ಸಸಿ ನೆಡಿಸಿ,
ಹಂಪಿ ಟೈಮ್ಸ್ ಗೆ ಫೋಟೋ ಕಳುಹಿಸಿ...



ನೂತನವಾಗಿ ಶಾಲೆ ಪ್ರವೇಶಿಸುತ್ತಿರುವ ಮಗುವಿನಿಂದ ಒಂದು ಸಸಿ ನೆಡಿಸಿ. ಆ ಸಸಿಗೆ ಆ ಮಗುವಿನ ಹೆಸರನ್ನೇ ನಾಮಕರಣ ಮಾಡಿ, ಆ ಮಧುರಕ್ಷಣವನ್ನು ಕ್ಯಾಮರಾದಲ್ಲಿ ಸೆರೆಹಿಡಿದು, ಮಗುವಿನ ಮತ್ತು ಸಸಿಯ ಹೆಸರು, ಶಾಲೆಯ ಹೆಸರು, ಊರು, ಜಿಲ್ಲೆ ನಮೂದಿಸಿ ಕಳುಹಿಸಿಕೊಡಿ.
ಆಯ್ದ ಫೋಟೋಗಳನ್ನು
**ಹಂಪಿ ಟೈಮ್ಸ್‌ನಲ್ಲಿ ಪ್ರಕಟಿಸಲಾಗುವುದು.**



SCAN & READ
HAMPI TIMES E-PAPER

ಫೋಟೋಗಳನ್ನು ಈ ಕೆಳಗಿನ ಇಮೇಲ್/ವಾಟ್ಸಪ್ ನಂಬರಿಗೆ ಸಸಿ ನೆಟ್ಟ ದಿನವೇ ಕಳುಹಿಸಿ

www.hampitimes.com / https://epaper.hampitimes.com
Email: hampitimes@gmail.com

Contact for Advertisement place : 94486 33038

## ಭಾರತವನ್ನು ಜಾಗತಿಕ ಕೇಂದ್ರವನ್ನಾಗಿ ಮಾಡುವಲ್ಲಿ ಕೃಷಿ ವಿದ್ಯಾರ್ಥಿಗಳ ಪಾತ್ರ ಪ್ರಮುಖ : ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್



**ಹಂಪಿ ಟೈಮ್ಸ್ ರಾಯಚೂರು**

ಭಾರತವನ್ನು ಆಹಾರ ಮತ್ತು ಕೃಷಿ ಉತ್ಪಾದನೆಯ ಜೊತೆಗೆ ತಂತ್ರಜ್ಞಾನ, ನಾವೀನ್ಯತೆ ಮತ್ತು ನೈತಿಕತೆಯ ಜಾಗತಿಕ ಕೇಂದ್ರವನ್ನಾಗಿ ಮಾಡುವಲ್ಲಿ ಕೃಷಿ ವಿದ್ಯಾರ್ಥಿಗಳ ಪಾತ್ರ ಪ್ರಮುಖ ಎಂದು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಹೇಳಿದರು.

ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ ಬಳ್ಳಾರಿಯಿಂದ ವರ್ಚುವಲ್ ಮೂಲಕ ಭಾಗವಹಿಸಿ ಅವರು ಮಾತನಾಡಿದರು. ಕೃಷಿ ಆಧಾರಿತ ನವೋದ್ಯಮಗಳು ಭಾರತೀಯ ಆರ್ಥಿಕತೆಯಲ್ಲಿ ಕ್ರಾಂತಿಯನ್ನುಂಟು ಮಾಡುತ್ತಿವೆ. ಇಂದು ಭಾರತದ ಆರ್ಥಿಕತೆಯು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದ್ದು, ಕೃಷಿ ವಲಯವು ಅದರಲ್ಲಿ ಪ್ರಮುಖ ಕೊಡುಗೆ ಹೊಂದಿದೆ. ಸ್ಟಾರ್ಟ್ ಆಪ್ ಇಂಡಿಯಾ, ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತ ದಂತಹ ಯೋಜನೆಗಳಿಗೆ ಸೇರಿ ದೇಶವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಯುವಪೀಳಿಗೆ ಮುಂದಾಗಬೇಕು ಎಂದು ಅವರು ಕರೆ ನೀಡಿದರು.

ಕೃಷಿ ಅಭಿವೃದ್ಧಿಯಲ್ಲಿ ತೋಟಗಾರಿಕೆ ವಲಯವು ವಿಶೇಷ ಸ್ಥಾನ ಹೊಂದಿದೆ. ತೋಟಗಾರಿಕಾ ಬೆಳೆಗಳು ಪ್ರತಿ ಯೂನಿಟ್ ಪ್ರದೇಶಕ್ಕೆ ಹೆಚ್ಚಿನ ಆದಾಯ, ಉದ್ಯೋಗ ಮತ್ತು ಪೋಷಣೆಯನ್ನು ನೀಡುತ್ತಿರುವುದರಿಂದ, ಈ ಬೆಳೆಗಳು ವಾಣಿಜ್ಯ ರೂಪವನ್ನು ಪಡೆದುಕೊಳ್ಳುತ್ತಿವೆ, ಇದರಿಂದಾಗಿ ಈ ಬೆಳೆಗಳ ಉತ್ಪಾದನೆಯತ್ತ ರೈತರ ಒಲವು ಹೆಚ್ಚುತ್ತಿದೆ. ಇಂದು ಔಷಧೀಯ ಮತ್ತು ಸುಗಂಧ ದ್ರವ್ಯಗಳ ಆಧಾರದ ಮೇಲೆ ವ್ಯಾಪಾರವು ಪ್ರಪಂಚದಾದ್ಯಂತ ಬೆಳೆಯುತ್ತಿದೆ. ನಮ್ಮ ರೈತರು ಸಾಂಪ್ರದಾಯಿಕ ಬೆಳೆಗಳ ಜೊತೆಗೆ ಔಷಧೀಯ ಮತ್ತು ಪರಿಮಳಯುಕ್ತ ಬೆಳೆಗಳ ಮುಂದುವರಿದ ಕೃಷಿಯತ್ತ ಗಮನ ಹರಿಸಬೇಕು" ಎಂದು ಅವರು ಹೇಳಿದರು.

ಪ್ರಸ್ತುತ ಕೃಷಿ ಉತ್ಪಾದನೆಯ ಬೇಡಿಕೆಯನ್ನು ಪೂರೈಸಲು ಹೊಸ ಪರ್ಯಾಯಗಳನ್ನು ಉತ್ತೇಜಿಸುವ ಅವಶ್ಯಕತೆಯಿದೆ. ಕಡಿಮೆ ಭೂಮಿಯಲ್ಲಿ ಹೆಚ್ಚಿನ ಇಳುವರಿ ನೀಡಲು ಲಂಬ ಕೃಷಿ ತಂತ್ರಗಳ ಕುರಿತು ಹೆಚ್ಚಿನ ಕೆಲಸ ಮಾಡಬೇಕಾಗಿದೆ. ಡ್ರೋನ್ ತಂತ್ರಜ್ಞಾನ, ಉಪಗ್ರಹ ಚಿತ್ರಣ ಮತ್ತು ಸ್ಮಾರ್ಟ್ ನೀರಾವರಿ ವ್ಯವಸ್ಥೆಗಳ ಬಳಕೆಯು ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ನೀರಿನ ಬಳಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತಿದೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಮೇಲಿನ ರೈತರ ಅವಲಂಬನೆಯನ್ನು ಕಡಿಮೆ ಮಾಡುವ ಅವಶ್ಯಕತೆಯಿದೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದ ಮಣ್ಣು, ನೀರು ಮತ್ತು ಆಹಾರ ಪದಾರ್ಥಗಳು ಕಲುಷಿತಗೊಳ್ಳುತ್ತಿದ್ದು, ಇದು ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಸಾವಯವ ಕೃಷಿ, ನೈಸರ್ಗಿಕ ಕೃಷಿ, ಕಡಿಮೆ ನೀರಿನಿಂದ ಹೆಚ್ಚಿನ ಇಳುವರಿ ಪಡೆಯುವುದು ಮತ್ತು ಸುರಕ್ಷಿತ ಆಹಾರವನ್ನು ಉತ್ಪಾದಿಸಲು ಪರಿಸರ ಸ್ನೇಹಿ ಕೃಷಿಯಂತಹ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಕಡೆಗೆ ನಾವು ಹೆಚ್ಚು ಶ್ರಮಿಸಬೇಕಾಗಿದೆ. ಇದರಿಂದಾಗಿ ಕೃಷಿ ಉತ್ಪಾದನೆಯು ಶುದ್ಧವಾಗಿರುತ್ತದೆ ಮತ್ತು ಉತ್ಪಾದನೆ ಹೆಚ್ಚಾಗುತ್ತದೆ ಮತ್ತು ಇದು ಪರಿಸರ ಸಂರಕ್ಷಣೆಗೂ ಸಹಾಯ ಮಾಡುತ್ತದೆ" ಎಂದು ಅವರು ಅಭಿಪ್ರಾಯಪಟ್ಟರು.

"ಪ್ರಸ್ತುತ ಜಾಗತಿಕ ತಾಪಮಾನ ಏರಿಕೆ, ನೀರಿನ ಬಿಕ್ಕಟ್ಟು, >>3

## ನಿಮ್ಮ ಬೆಂಬಲವೇ ನಮ್ಮ ಬಲ

**ಸ್ಥಳೀಯ ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆ ಮತ್ತಷ್ಟು ಅಭಿವೃದ್ಧಿಪಡಿಸಲು ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ, ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಯೇ ನಮ್ಮ ಧ್ಯೇಯ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು ಹಾಗೆಯೇ ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ಪ್ರತಿ ಸುದ್ದಿಯ ಹಿಂದೆ ಯೋಗ್ಯ ಶ್ರಮವಿದೆ. ಪತ್ರಿಕೆ ಕೊಂಡು ಓದಿ, ಆ ಶ್ರಮವನ್ನು ಗೌರವಿಸಿ!**

**ಹಂಪಿ ಟೈಮ್ಸ್, ಹೊಸಪೇಟೆ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**- ಜಾಹೀರಾತು ವ್ಯವಸ್ಥಾಪಕರು.**

**ಮನುಷ್ಯನ ಗುಣವೊಂದಿದೆ ತಾನು ಮಾಡಿದ ಯಾವುದೆ ಬಗೆಯ ಕಾರ್ಯಕ್ಕೆ ಅವನ ಜೊತೆ ನಡೆಯುವ ಸಮಾಜದ ಜನ ಹೊಗಳಬೇಕು, ಟೀಕಿಸಬೇಕು, ಸಮಾಧಾನ ಪಡಬೇಕು, ಕೊನೆ ಪಕ್ಷ ಪರವಾಗಿಲ್ಲ ಮಾರಾಯ ಅಂತ ಆದರೂ ಹೇಳಬೇಕು. ಆಗ ಅವನ ಭಾವಸ್ತರಕ್ಕೆ ಬೆಲೆ, ದೇಹಕ್ಕೆ ನೆಮ್ಮದಿ. ಆದರೆ ಈಗಿನ ಜೀವನ ಜಂಜಾಟದಲ್ಲಿ ಯಾರು ಯಾರ ಸಾಧನೆಯನ್ನು ನಿಂತು ಮಾತನಾಡುವ, ಹೊಗಳುವುದಕ್ಕೆ ಸಮಯವೇ ಇಲ್ಲ. ರೀಲ್ಸ್ ಅನ್ನೋ ಪರಿಕಲ್ಪನೆಯು ನಗರ-ಹಳ್ಳಿಗಳೆಂಬ ಪರಿಧಿಗಳಿಲ್ಲದೆ ಎಲ್ಲರನ್ನು ಆವರಿಸಿಬಿಟ್ಟಿದೆ....**

# ಹೊಣೆಗಾರಿಕೆ ಮರೆಸಿದ ರೀಲ್ಸ್ ವ್ಯಸನ



ಮನುಷ್ಯ ಈ ಸಮಾಜದಲ್ಲಿ ಬದುಕು ಮಾಡುವುದಕ್ಕೆ ಶುರು ಮಾಡಿದ ತರುವಾಯ ಹೊಣೆಗಾರಿಕೆ ಅನ್ನೋದು ಅವನ ಹೆಗಲಿನ ಮೇಲೆ ಗಟ್ಟಿಯಾಗಿ ನಿಂತು ಬಿಟ್ಟಿತು. ವ್ಯಕ್ತಿಯು ತಾನು ಹುಟ್ಟಿದ, ಬೆಳೆದ ಕುಟುಂಬದ ನೆಲೆಯ ಹೊಣೆಗಾರಿಕೆಯ ಜೊತೆಯಲ್ಲಿ ತಾನು ಹಂಚಿಕೊಂಡು ಬದುಕಿರುವ ಸಮಾಜದ ನೀತಿ, ನಿಯಮ, ಆಚಾರ-ವಿಚಾರಗಳನ್ನು ಕೆಡದಂತೆ ನಡೆಯುವುದು ಕೂಡ ಹೊಣೆಗಾರಿಕೆಯೇ ಆಗಿದೆ. ಈ ಹೊಣೆಗಾರಿಕೆಯ ತಾತ್ವಿಕತೆಯು ಸಮಾಜದ ಜನರ ಮನಸ್ಸಿನಲ್ಲಿ ಬಿಗುವಾದಷ್ಟು ಆರೋಗ್ಯ ಪೂರ್ಣವಾದ ಪರಿಸರದ ಅಸ್ತಿತ್ವ ಇರುತ್ತದೆ ಎನ್ನುವುದು ನಮ್ಮ ಸಾಮಾನ್ಯ ತಿಳುವಳಿಕೆ. ಆದರೆ ಈಗ ನಮ್ಮ ಬದುಕಿನ ಲಯ ಪಲ್ಲಟವಾಗಿದೆ. ಕಾಯಕದಲ್ಲಿ ಯಶಸ್ಸು ಸಾಧಿಸುವ ನೆಲೆಯಿಂದ ಜನ ಮಾನಸದಲ್ಲಿ ನೆಲೆ ನಿಲ್ಲುವಂತಹ ಪ್ರಜ್ಞೆ ಮತ್ತು ಪರಿಸರ ಒಂದು ಕಾಲದಲ್ಲಿ ಇತ್ತು ಮತ್ತು ಅದಕ್ಕೆ ಮಹತ್ವವು ಅಧಿಕವಾಗಿತ್ತು. ಈಗ ಕಾಲ ಬದಲಾಗಿದೆ ಜನರ ಮನೋಭಾವಗಳು ಭಿನ್ನವಾದ ಕಾರಣ ಅವರ ಅಭಿರುಚಿಗಳು ಮೌಲ್ಯರಹಿತವಾಗಿರುವುದು ಸಾಮಾಜಿಕ ಹೊಣೆಗಾರಿಕೆಯ ಕುಣಿಕೆಯನ್ನು ಸಡಿಲವಾಗಿಸಿದೆ.

ಆಧುನಿಕ ಮಾಧ್ಯಮಗಳು ನಮ್ಮ ಜೀವನದ ಪಥವನ್ನು ನಡೆಸುತ್ತಿವೆ. ಅದರಲ್ಲೂ ನಮ್ಮ ದೇಶದಲ್ಲಿನ ಬಹತೇಕ ಯುವಕ-ಯುವತಿಯರು ರೀಲ್ಸ್ ಅನ್ನೋ ವ್ಯಸನಕ್ಕೆ ಒಳಗಾಗಿದ್ದಾರೆ. ಇಲ್ಲಿ ಬಹು ಮುಖ್ಯವಾದದ್ದು ಎಷ್ಟು ಜನ ತನ್ನನ್ನು ಫಲೋ ಮಾಡುತ್ತಿದ್ದಾರೆ; ಲೈಕ್ ಮಾಡಿದ್ದಾರೆ; ಶೇರ್ ಮಾಡಿದ್ದಾರೆ ಮತ್ತು ನಾನು ಹೆಚ್ಚು ವೈರಲ್ ಆಗಬೇಕು ಅಂಬೋ ಗೀಳು ಸಾಮಾಜಿಕ ಹೊಣೆಗಾರಿಕೆಯನ್ನು ಮರೆತು ನಡೆಯುವುವಂತೆ ಮಾಡಿದೆ. ಸಾಮಾಜಿಕ ಜಾಲತಾಣದಲ್ಲಿ ಈಗಾಗಲೇ ಇರುವ ಹಾಡು, ಘಟನೆಯನ್ನು ಆಧಾರಿತ ವಿಡಿಯೋ, ಡೈಲಾಗ್‌ಗಳಿಗೆ ತನ್ನದೇ ರೀತಿಯಲ್ಲಿ ಭಾಷಿಕ, ಆಂಗಿಕ ಅಭಿನಯವನ್ನು ನೀಡುವುದೇ ರೀಲ್ಸ್‌ಗಳಾಗಿವೆ ಅಂಬೋದು ನಮ್ಮ ಅರಿವಿನಲ್ಲಿದೆ. ಇಲ್ಲಿ ಮುಖ್ಯವಾಗಿ ನಾವು ವಿವೇಚಿಸಬೇಕಾಗಿದ್ದು ರೀಲ್ಸ್ ಅಭಿವ್ಯಕ್ತಿಗೆ ಯುವಜನತೆ ತೊಡಗಿಸಿಕೊಂಡ ಬಗೆ ಏನು? ಹೇಗೆ? ಎಂಬುವುದನ್ನು.

ನಡು ರಸ್ತೆಯಲ್ಲಿ ಕುಣಿಯುವುದು; ರೈಲ್ವೆ ಪಟ್ಟಿಯಲ್ಲಿ ಮಲಗುವುದು, ಬೆಟ್ಟ, ಗುಡ್ಡ, ಎತ್ತರದ ಕಟ್ಟಡಗಳಿಂದ ನೆಗೆಯುವುದು, ಇಳಿಯುವುದು, ಹತ್ತುವುದು; ನದಿಗೆ, ಸಮುದ್ರಕ್ಕೆ ಹಾರುವುದು; ಬೆಂಕಿ ಹಚ್ಚಿಕೊಳ್ಳುವುದು ಒಂದು ಕಡೆಯಾದರೆ ಇನ್ನೂ ಬದುಕಿನ ದೈನಂದಿನ ಎಲ್ಲ ಘಟನೆಗಳನ್ನು ಮುಚ್ಚು ಮರೆಯಿಲ್ಲದೆ ಖಾಸಗಿ, ಶೀಲ, ಅಶ್ಲೀಲ ಅನ್ನೋ ಮಿತಿಗಳಿಲ್ಲದೆ ಎಲ್ಲವನ್ನು ರೀಲ್ಸ್ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು ಸಂಭ್ರಮಿಸುವುದನ್ನು ಅತಿಯಾಗಿ ಕಾಣುತ್ತೇವೆ. ಈ ರೀತಿಯ ಹುಚ್ಚಾಟವು ಸಾವು-ನೋವು, ಸಂಕಟ ಗಳನ್ನು ಹುಟ್ಟು ಹಾಕಿದೆ ಎನ್ನುವುದನ್ನು ಮರೆಯುವಂತಿಲ್ಲ. ನಮ್ಮ ಮನೋಕಾಮನೆಗಳು ಹೀಗೆ ರೂಪುಗೊಳ್ಳುವುದಕ್ಕೆ ವಿಕಸಿತವಾದ ನಾಗರೀಕ ಸಮಾಜ ಮತ್ತು ಮರೆಯಾಗುತ್ತಿರುವ ನೆಲದ ಪರಂಪರೆಯೇ ಕಾರಣ ವಾಗಿದೆ.

ನಮ್ಮ ಬದುಕಿನ ಜೊತೆಯಲ್ಲಿ ಮನೆ, ಮಠ, ದೇವಸ್ಥಾನ, ಅಂಗಳ, ಗದ್ದೆ, ಬಯಲು, ದನ-ಕರು, ನದಿಗಳೆಲ್ಲ ಆಪ್ತತೆಯನ್ನು ಪಡೆದಿದ್ದವು.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ಮಕ್ಕಳ ಶಾರೀ ರಿಕ ಮತ್ತು ಮಾನಸಿಕ ಅಭಿವ್ಯಕ್ತಿಗೆ ಬಯಲು ಮತ್ತು ಬಯಲಿನ ಆಟಗಳು, ಸಂಜೆ ಯಾದರೆ ಊರಿನಲ್ಲಿ ನಡೆ ಯುವ ಆಟ, ಯಕ್ಷಗಾನ, ನಾಟಕ, ಭಜನೆ, ದಾಸರ ಪದ ಇತ್ಯಾದಿಗಳ ಜೊತೆಯಲ್ಲಿ ಮನೆಯಲ್ಲಿ ಮಾತು-ಕತೆಗೆ ನಿತ್ಯ ಇರುತ್ತಿದ್ದ ಅಜ್ಜ-ಅಜ್ಜಿ, ಅಪ್ಪ-ಅಮ್ಮ, ಅಕ್ಕ-ತಂಗಿ, ಚಿಕ್ಕಮ್ಮ-ಚಿಕ್ಕಪ್ಪ, ಮಾವ-ಅತ್ತೆ, ನೆರೆ-ಕರೆಯವರ ಒಡನಾಟವು ಯಾರಿಗೂ ಬೋರು ಎನ್ನುವ ಪದವನ್ನೇ ನೆನಪಿಗೆ ತರುತ್ತಿರಲಿಲ್ಲ. ಆದರೆ ಈಗ ಜೀವನ ವಿನ್ಯಾಸವು ಮೊಬೈಲ್ ಫೋನಿನ ಜೊತೆಯಲ್ಲಿ ಜೋತುಕೊಂಡಿರುವುದರಿಂದ ರೀಲ್ಸ್‌ಗಳಿಗೆ ಮಹತ್ವ ಬಂದಿದೆ ಕೆಲವರಿಗೆ ಇದೇ ಬದುಕಾಗಿದೆ. ಮನುಷ್ಯನ ಗುಣವೊಂದಿದೆ ತಾನು ಮಾಡಿದ ಯಾವುದೆ ಬಗೆಯ ಕಾರ್ಯಕ್ಕೆ ಅವನ ಜೊತೆ ನಡೆಯುವ ಸಮಾಜದ ಜನ ಹೊಗಳ ಬೇಕು, ಟೀಕಿಸಬೇಕು, ಸಮಾಧಾನ ಪಡಬೇಕು, ಕೊನೆ ಪಕ್ಷ ಪರವಾಗಿಲ್ಲ




ಮಾರಾಯ ಅಂತ ಆದರೂ ಹೇಳಬೇಕು ಆಗ ಅವನ ಭಾವಸ್ತರಕ್ಕೆ ಬೆಲೆ, ದೇಹಕ್ಕೆ ನೆಮ್ಮದಿ. ಆದರೆ ಈಗಿನ ಜೀವನ ಜಂಜಾಟದಲ್ಲಿ ಯಾರು ಯಾರ ಸಾಧನೆಯನ್ನು ನಿಂತು ಮಾತ ನಾಡುವ, ಹೊಗಳುವುದಕ್ಕೆ ಸಮಯವೇ ಇಲ್ಲ. ನಮ್ಮ ದುಡಿಮೆ ಮತ್ತು ಒತ್ತಡ ತುಂಬಿದ ಬದುಕು ಜೀವ ಸಂಬಂಧವನ್ನು ಮರೆ ಮಾಚಿರುವ ಕಾರಣ ನಾವು ಸಾಮಾಜಿಕ ಜಾಲತಾಣಗಳಲ್ಲಿ ಬಿಗುವಾಗಿ ಇಣುಕುತ್ತಿದ್ದೇವೆ. ತನ್ನನ್ನು ಲೋಕಕ್ಕೆ ಕಾಣಿಸುವುದಕ್ಕೆ ಪ್ರಯತ್ನಗಳು ಲಂಗು-ಲಗಾಮು ಇಲ್ಲದೆ ನಡೆಯುತಿದೆ. ಹತ್ತು ಸೆಕೆಂಡಿನ ಸಣ್ಣ ವಿಡಿಯೋ ತುಣುಕು ಒಂದನ್ನು ಆನ್ಲೈನ್‌ನಲ್ಲಿ ಹಂಚಿಕೊಂಡರೆ ಸಾವಿರಾರು ಜನ ನೋಡುತ್ತಾರೆ ಮತ್ತೆ ಲೈಕ್ ಕೊಡುತ್ತಾರೆ, ಮನಸ್ಸಿಗೆ ಒಗ್ಗುವ-ಒಗ್ಗಾದ ಕಮೆಂಟುಗಳನ್ನು ಹಾಕುತ್ತಾರೆ ಎನ್ನುವುದೇ ಒಂದು ಸಾಧನೆ ಅನ್ನಿಸಿದೆ.

ನಮ್ಮ ದಿನದ ಬದುಕಿನ ಎಲ್ಲವನ್ನು ಮುಚ್ಚು ಮರೆಯಿಲ್ಲದೆ ರೀಲ್ಸ್ ಮಾಡಿ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿರುವುದು ಸಾಮಾನ್ಯವಾಗಿದೆ. ಇಲ್ಲಿ ಯಾವುದನ್ನು ಹಂಚಿಕೊಳ್ಳಬೇಕು, ಯಾವುದನ್ನು ಹಂಚಿಕೊಳ್ಳ ಬಾರದು ಅನ್ನೋ ನಿಯಮವಾಗಲಿ, ತಿಳುವಳಿಕೆಯಾಗಲಿ ನಮ್ಮಲ್ಲಿ ಇಲ್ಲ. ಆನ್ಲೈನ್‌ನ ಮಾಧ್ಯಮವು ಅಷ್ಟೆ. ನಾವು ಏನನ್ನು ಹಂಚಿಕೊಳ್ಳುತ್ತೇವೋ ಅದನ್ನೇ ಸ್ವೀಕರಿಸುತ್ತದೆ. ನಾವು ಮೊಬೈಲ್ ನಡೆಸುತ್ತೇವೆ ಹೊರತು ಮೊಬೈಲ್ ನಮ್ಮನ್ನು ನಡೆಸುವುದಲ್ಲ ಎನ್ನುವ ಎಚ್ಚರವಿರಬೇಕು ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಮೀರಬಾರದು.

ರೀಲ್ಸ್ ಅನ್ನೋ ಪರಿಕಲ್ಪನೆಯು ನಗರ-ಹಳ್ಳಿಗಳೆಂಬ ಪರಿಧಿಗಳಿಲ್ಲದೆ ಎಲ್ಲರನ್ನು ಆವರಿಸಿಬಿಟ್ಟಿದೆ. ರೀಲ್ಸ್ ಮಾಡುವವರು ಮತ್ತು ಅದನ್ನು ನೋಡುವವರು ತಮ್ಮ ನೈಜ್ಯವಾದ ಕಾಯಕವನ್ನು ಮರೆತು ಬಿಟ್ಟಿದ್ದಾರೆ. ಅವರ ಮನೋಭಾವವೆ ಶೂನ್ಯವಾಗುವಂತಹ ಪರಿಸ್ಥಿತಿ ರೂಪು ಗೊಂಡಿದೆ ಎನ್ನುವುದು ನಮ್ಮಲ್ಲಿ ಆತಂಕವನ್ನು ಹುಟ್ಟು ಹಾಕಿದೆ. 'ನಮ್ಮೂರಿನ ಶಿವರಾಯರ ಮಗಳು ರಜೆಯಲ್ಲಿ ಮನೆಯಲ್ಲಿ ಇದ್ದವಳು. ಅಡಿಕೆಯ ಗೊನೆ ತೆಗೆಯುವ ರೀಲ್ಸ್ ಮಾಡಬೇಕೆಂದು ಯೋಚಿಸಿದವಳು. ತೋಟಕ್ಕೆ ನಡೆದು ಕಾಲಿಗೆ ಗುದಿಯನ್ನು ಹಾಕಿಕೊಂಡು ಬಾನಿಗೆ ನಿಂತಿದ್ದ ಅಡಿಕೆ ಮರವನ್ನು ಹತ್ತಿ, ಅಡಿಕೆಯ ಕೊನೆಯ ಸನಿಹಕ್ಕೆ ಹೋಗಿ ಒಂದು ಕೈಯಲ್ಲಿ ಮೊಬೈಲ್ ಇನ್ನೊಂದು ಕೈಯಲ್ಲಿ ಅಡಿಕೆಯ ಕೊನೆಯನ್ನು ಹಿಡಿದುಕೊಂಡು ಕಸರತ್ತು ಮಾಡಿದಳು. ಅವಳಿಗೆ ತಾನು ಮರದ ಮೇಲಿದ್ದೇನೆ ಅನ್ನೋ ಜ್ಞಾನವೇ ಇರಲಿಲ್ಲ ಬದಲಿಗೆ ಅವಳು ವಿಡಿಯೋದ ಮೇಲೆ ಮನಸ್ಸು ಹಚ್ಚಿದ್ದಳು. ಕ್ಷಣ ಮಾತ್ರದಲ್ಲಿ ಕೈ ತಪ್ಪಿ ಮರದಿಂದ ಕೆಳಕ್ಕೆ ಬಿದ್ದಳು. ಜೀವ ಹೋಗಲಿಲ್ಲವಾದರೂ ಬೆನ್ನುಮೂಳೆ ಮುರಿದು ಶರೀರದ ಸತ್ವವನ್ನೇ ಕಳೆದುಕೊಂಡು ಬಿಟ್ಟಳು. ಶಿವರಾಯರು ಅದೆಷ್ಟೋ ಹಣ ಖರ್ಚು ಮಾಡಿದರು ಅತ್ತು-ಕರೆದು ಈಗ ಮೌನವಾಗಿದ್ದಾರೆ. ಮಗಳು ಹಾಸಿಗೆಯಲ್ಲಿ ಉಸಿರು ಹಿಡಿದುಕೊಂಡು ಇದ್ದಾಳೆ. ಇಂತಹ ಅದೆಷ್ಟೋ ಘಟನೆಗಳು ದಿನ ನಿತ್ಯ ನಡೆಯುತ್ತದೆ. ನಾವು ಯೋಚಿಸ ಬೇಕಾಗಿದ್ದು ನಮ್ಮ ಹವ್ಯಾಸಗಳು ಸಮಾಜದ ಆರೋಗ್ಯವನ್ನು ಕೆಡಿಸುತ್ತಿದ್ದೆ ಮತ್ತು ನಮ್ಮ ಬದುಕಿನ ಪಥವನ್ನೇ ನಾಶ ಮಾಡಿ ಬಿಡುತ್ತದೆ. ಶಿಕ್ಷಣವನ್ನು ಕಲಿತ ಯುವಕ-ಯುವತಿಯರು ಜೀವ ಸಂಬಂಧವನ್ನು ಕಟ್ಟುವ ಕಾರ್ಯದಲ್ಲಿ ತೊಡಸಿಕೊಂಡು ಸಾಮಾಜಿಕ ಮೌಲ್ಯ ಮತ್ತು ಹೊಣೆಗಾರಿಕೆಯನ್ನು ಅರಿತುಕೊಳ್ಳಬೇಕು ರೀಲ್ಸ್ ಎಂಬುವುದೇ ನಮ್ಮ ಜೀವನದ ಗುರಿ ಅಲ್ಲ ಎನ್ನುವ ಇತಿ-ಮಿತಿಯನ್ನು ಅರ್ಥ ಮಾಡಿಕೊಳ್ಳಬೇಕು.

## ಪ್ರೇಕ್ಷಕರ ಮನಗೆದ್ದ ಮಾಯ ಮದ ಮರ್ಧನ ಅಲ್ಲಮಪ್ರಭು ನಾಟಕ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಪಂಪಾ ಕಲಾಮಂದಿರದಲ್ಲಿ ಇಳಕಲ್ ತಾಲೂಕು ರಂಗ ಸಂಗಮ ಕಲೆ ಮತ್ತು ಸಂಸ್ಕೃತಿಕ ಸಂಘ ಇಳಕಲ್ ತಂಡದಿಂದ ದಿ.ಫಕೀರಪ್ಪ ವರದ ವಿರಚಿತ "ಮಾಯ ಮದ ಮರ್ಧನ ಅಲ್ಲಮಪ್ರಭು" ಎಂಬ ಕನ್ನಡ ನಾಟಕವನ್ನು ಭಾನುವಾರ ಪ್ರದರ್ಶನಗೊಂಡು ಪ್ರೇಕ್ಷರ ಮೆಚ್ಚುಗೆಗೆ ಪಾತ್ರವಾಯಿತು.



ಅಲ್ಲಮಪ್ರಭುವಿನ ಜನ್ಮದಿಂದ ಅನುಭವ ಮಂಟಪದ ಅದ್ಯಾತ್ಮ ಚಿಂತನೆಯ ವಿಷಯಾಧಾರಿತ ನಾಟಕವು ಸ್ಥಳೀಯ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ತರುಣ ಅಲ್ಲಮನಾಗಿ ಶೋಧನ್ ಹಂಚಾಟಿ, ಅನುಭವ ಮಂಟಪದ ಅಲ್ಲಮನಾಗಿ ಮಹಾಂತೇಶ ಗಜೇಂದ್ರಗಡ ಹಾಗೂ ರಾಜಕುಮಾರಿ ಮತ್ತು ಅಕ್ಕಮಹಾದೇವಿಯಾಗಿ ಉಮಾರಾಣಿ ಅವರುಗಳ ಅಭಿನಯ ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾದರೆ, ಸ್ಥಳೀಯ ಕನ್ನಡ ಕಲಾ ಸಂಘದ ಕಲಾವಿದ ಶ್ರೀಕೃಷ್ಣ ಕುಲಕರ್ಣಿ(ಸಾರವಾಡ) ಅವರ ಅರ್ಚಕನ ಪಾತ್ರ ತಿಳಿ ಹಾಸ್ಯದೊಂದಿಗೆ ಗಮನ ಸೆಳೆಯಿತು. ಉಳಿದಂತೆ ಸುನಂದಾ ಕಂದಗಲ್ಲ, ರೇಷ್ಮಾ ಅಳವಂಡಿ, ಕಸ್ತೂರಿ ಮೆಹರವಾಡೆ, ದಿವ್ಯಾ ಕೂಡಲಗಿ, ಕಾರ್ತಿಕ ಕೊಪ್ಪರದ, ಉಮೇಶ್ ಟಂಕಸಾಲಿ, ಕಾರ್ತಿಕ ಮೈಲಿ, ಮುರಳೀಧರ ಮಾದಗುರಡಿ, ಮತ್ತು ಮಾಸ್ಟರ್ ಪವನಕುಮಾರ ಹೊಸಪೇಟೆ ಮನೋಜ್ಞವಾಗಿ ಅಭಿನಯಿಸಿದರು.

ಪ್ರಸಾಧನ ಕಿರಣ ಮಹಾಲೆ, ಸಂಗೀತ ಕುಮಾರ ಸಪ್ಪಂಡಿ ಹಾಗೂ ಮಹಾಂತೇಶ ಗಜೇಂದ್ರಗಡ ಇಳಕಲ್ ಇವರು ರಂಗ ನಿರ್ದೇಶನ ಮಾಡಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ವರುಣ

ಇಳೆ ಕಾತುರದಲ್ಲಿರಲು ಸೆಳೆಯಲು ಮಳೆ
ಸುರಿಯಿತು ಸುರಚಾಪ ಸೃಜಿಸಿ ಮಳೆ
ಮೃತ್ತಿಕೆ ಹವಣಿಸುತ್ತಿತ್ತು ಹದವಾಗಲು
ಆರಂಬಗಾರ ಆರಂಬ ಆರಂಭಿಸಲು
ನಾಂದಿ ಹೊಮ್ಮಿಸಿತು ಹೊನಲಿನ ವರ್ಷ
ಆರಂಬಿಕರಲ್ಲಿ ಹಾದು ಹರಿದಾಡಿತು ಹರ್ಷ

ನಿಸರ್ಗದ ಚೆಲುವು ನಿಂತಿತು ಮೈದುಂಬಿ
ಮನ ಪುಳಕಿತವಾಯಿತು ಚೆಲುವು ಕಣ್ತುಂಬಿ
ನದಿ ಹರಿಯಲು ನಾದ ನಿನಾದ ಮಾಡಿ
ಅರಳಿತು ಮೊಗ ಜಲಸೌಷ್ಠವವ ನೋಡಿ
ಜಲಚರಗಳು ಜೋರಾಗಿ ಜಂಕಿಸಲು
ನದಿಯೊಟ್ಟಿಗೆ ಹರಿತು ಹರ್ಷದ ಹೊನಲು

ತರು ಲತೆಗಳಲಿ ಮೂಡಿ ಹಚ್ಚ ಹಸಿರು
ದೀರ್ಘವಾಯಿತು ಆಯಸ್ಸಿನ ಉಸಿರು
ವಿಹರಿಸಲು ವಿಹಾರಿಗಳು ಸಿಕ್ಕಿತು ರಹದಾರಿ
ಹೃದಯ ತುಂಬಿತು ತುಳಿದಾಗ ಹರಿದಾರಿ
ಧರಣಿ ತುಂಬಿ ತುಳುಕಲು ತಂಪು
ಜಗಜನಮನದ ಸರ್ವಸಂಪತ್ತು ಸಂಪು

ಮುಸಲಧಾರೆ ಮರುಕಳಿಸಲು ಜೋರು
ನಳನಳಿಸುವುದು ಇಳೆಯ ಪೈರು
ಜನರಲಿ ಹೊಯ್ದಾಡಲು ಹಬ್ಬದ ಸಡಗರ
ಮಂದಹಾಸ ಮೂಡಿಸುವ ಮಳೆಯೇ ಆಗರ
ಎಲ್ಲೆಡೆ ಬೇಸಾಯದ ಬದುಕು ಬಂಗಾರ
ವರುಣನ ಒಲುಮೆಯೇ ಸೂಕ್ತ ಆಧಾರ.

– ಎಸ್.ಎಚ್.ಸೋಮಶೇಖರ, ಮಾಗಳ.

### ಮಡಿಲು

ಅಮ್ಮನ ಪ್ರೀತಿಯ ಮಡಿಲು
ಮಮತೆ ಪ್ರೇಮದ ಕಡಲು
ಮನೆಯನೇ ಬೆಳಗುವ ಹೊಸ್ತಿಲು
ಉಣಿಸಿದೆ ಕೈತುತ್ತಿನ ಬಟ್ಟಲು

ಸಹನೆಯ ಮೂರ್ತಿಯೇ ನೀನು
ನಿನ್ನಯ ನಾಡಿಯು ಜೇನು
ಹಿರಿಮೆಯು ಮುಟ್ಟಿದೆ ಭಾನು
ನೀ ಜೊತೆಗೆ ಬದುಕೆಲ್ಲಾ ಹೊನ್ನು

– ಚೇತನ ಭಾರ್ಗವ, ಬೆಂಗಳೂರು

ದೇವಾಲಯ ದರ್ಶನ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ
ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ
–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

ಹಂಪಿ ಟೈಮ್ಸ್
SCAN TO WATCH

SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...

# ಕ್ರೀಡಾ ಮೀಸಲಾತಿಯಡಿ ಸರ್ಕಾರಿ ಹುದ್ದೆಯೇರಿದ ರಾಷ್ಟ್ರೀಯ ಹಾಕಿ ಆಟಗಾರ್ತಿ ಮಂಜುಳ ಪ.ಗು.

ಬಾಲ್ಯದಲ್ಲಿ ಸಾಕಷ್ಟು ಕಷ್ಟದ ದಿನಗಳನ್ನು ಕಂಡಂತಹ ಸಾಧಕಿ ಮಂಜುಳ. ಇವರ ತಂದೆ ಪರಸಪ್ಪ ಕೆ ಎಸ್ ಆರ್ ಟಿ ಸಿ ಇಲಾಖೆಯಲ್ಲಿ ಬಸ್ ಕಂಡಕ್ಟರ್ ಕೆಲಸವನ್ನು ನಿರ್ವಹಿಸುತ್ತಿದ್ದರು ತಾಯಿ ಕಸ್ತೂರಿ ಗೃಹಿಣಿಯಾಗಿ ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು.

ಇವರು ಗದಗ ಜಿಲ್ಲೆ ಹಾಗೂ ತಾಲೂಕಿನ ಲಕ್ಕುಂಡಿ ಗ್ರಾಮದವರು ತಮ್ಮ ಬಾಲ್ಯದ ವಿದ್ಯಾಭ್ಯಾಸ ಅಂದರೆ 01–04 ನೇತರಗತಿವರೆಗೆ ಲಕ್ಕುಂಡಿ ಸರ್ಕಾರಿ ಪ್ರಾಥಮಿಕ ಪಾಠಶಾಲೆ, 05–07ನೇತರಗತಿವರೆಗೆ ಗದಗದ ಹುಲಕೋಟಿ ಶಾಲೆ 08–10 ಕೊಡಗು ಹಾಗೂ ಪ್ರಥಮ ಪಿಯುಸಿ ಯಿಂದ ಬಿ,ಕಾಂ ವರೆಗೆ ಮೈಸೂರಿನ ಟೆರಿಷಿಯಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಪಡೆದಿರುತ್ತಾರೆ.

ಬಾಲ್ಯದಲ್ಲಿ ಓಟಗಾರ್ತಿಯಾಗಬೇಕೆಂಬ ಕನಸುನೊಂದಿಗೆ ಸಾಧನೆಯನ್ನು ಬೆನ್ನತ್ತಿ ಓಡುತ್ತಿದ್ದ ಓಟಗಾರ್ತಿ ಮಂಜುಳ ಇವರನ್ನು ಗಮನಿಸಿದ ಇವರ ಅಜ್ಜ–ಗುಡ್ಡಪ್ಪ ಮೊಮ್ಮಗಳ ದೈಹಿಕ ಸದೃಢತೆಯನ್ನು ಗಮನಿಸಿ 05 ನೇತರಗತಿ ಓದುವಾಗ ಗದಗದ ಕ್ರೀಡಾ ವಸತಿ ಶಾಲೆಗೆ ಸೇರಿಸುತ್ತಾರೆ. ಕ್ರೀಡಾ ವಸತಿ ನಿಲಯಕ್ಕೆ ಸೇರಿಕೊಳ್ಳುವ ಅನಿವಾರ್ಯತೆಯು ಇವರಿಗೂ ಇರುತ್ತದೆ ಕಾರಣ ಅಂದಿನ ಕೌಟುಂಬಿಕ ಬಡತನ.

ಗದಗದಲ್ಲಿ ಅಂದಿನ ವಸತಿ ಶಾಲೆಯಲ್ಲಿನ ಕುಸ್ತಿ ತರಬೇತು ದಾರರಾದ ಶರಣಗೌಡ ಬೆಲೇರಿ ಇವರು ಮಂಜುಳ ರವರಿಗೆ ತರಬೇತಿ ಯನ್ನು ನೀಡುತ್ತಾರೆ ಕಾರಣ ಅಲ್ಲಿ ಅಂದಿನ ದಿನಕ್ಕೆ ಹಾಕಿ ತರಬೇತು ದಾರರು ಇರಲಿಲ್ಲ ಹಾಕಿ ಆಟವನ್ನು ಹಾಗೂ ದೈಹಿಕ ಸದೃಢತೆಯ ಚಟುವಟಿಕೆಗಳನ್ನು,ಶರಣಗೌಡರವರೇ ನಿಭಾಯಿಸುತ್ತಿ ದ್ದರು.

ಮುಂದೆ 07ನೇತರಗತಿ ಓದುವಾಗ ಬೇಲೇರಿಯವರು ಮಂಜುಳ ರವರನ್ನು ಕರೆದು ಕೊಡಗಿನಲ್ಲಿರುವ ಕೂಡಿಗೆ ಇಲ್ಲಿನ ಹಾಕಿ ಕ್ರೀಡಾವಸತಿ ನಿಲಯದಲ್ಲಿ ಆಯ್ಕೆ ಪ್ರಕ್ರಿಯೆ ಇದ್ದು ನೀನು ಆಯ್ಕೆಯಲ್ಲಿ ಪಾಲ್ಗೊಳ್ಳುವಂತೆ ತಿಳಿಸುತ್ತಾರೆ ಇವರ ಮಾತನ್ನು ತಪ್ಪದ ಮಂಜುಳ ಆಯ್ಕೆಯಲ್ಲಿ ಪಾಲ್ಗೊಂಡು ಹಾಕಿ ವಸತಿ ಶಾಲೆಗೆ ಆಯ್ಕೆಯಾಗುತ್ತಾರೆ.

ಮುಂದೆ ಬಿದ್ದಪ್ಪ ಹಾಗೂ ಸಂಜಯ್ ಬಾನದ್ ಇವರ ತರಬೇತಿಯಲ್ಲಿ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕಗಳನ್ನು ಪಡೆಯಲು ಪ್ರಾರಂಭಿಸುತ್ತಾರೆ

2013 ರಿಂದ 2018 ರವರೆಗೆ ಮೈಸೂರಿನ ಡಿ ವೈ ಈ ಎಸ್ ವಸತಿ ನಿಲಯಕ್ಕೆ ಆಯ್ಕೆಗೊಂಡು ವಿಜಯ ಕೃಷ್ಣನ್ ಇವರಿಂದ ತರಬೇತಿ ಪಡೆದು ಇನ್ನಷ್ಟು ಪಕ್ವಗೊಳ್ಳುತ್ತಾರೆ. ಬಿ,ಕಾಂ ಪದವಿ ಪಡೆದ ನಂತರ ಪತಿ ಯವರ ಪ್ರೇರಣಾ ನುಡಿಗಳಿಂದ ಬಿಪಿಇಡಿ ಮತ್ತು ಎಂಪಿಇಡಿ ದೈಹಿಕ ಶಿಕ್ಷಣ ಪದವಿಗಳನ್ನು ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡದಿಂದ ಪಡೆದುಕೊಳ್ಳುತ್ತಾರೆ ಇವರ ಪತಿ ಸತ್ಯಪ್ಪ ಜೆ ಎಸ್ ಡಬ್ಲ್ಯೂ ಕುಸ್ತಿ ತರಬೇತು ದಾರರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.


ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper

ಹಾಕಿ ಕ್ರೀಡೆಯಲ್ಲಿ ಇವರ ರಾಷ್ಟ್ರಮಟ್ಟದ ಸಾಧನೆಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ಪೊಲೀಸ್ ಇಲಾಖೆಯಲ್ಲಿ 2022 ರಲ್ಲಿ ಕ್ರೀಡಾ ಮೀಸಲಾತಿ ಅಡಿಯಲ್ಲಿ ಪೊಲೀಸ್ ಕಾನ್ಸ್ಟೆಬಲ್ ಹುದ್ದೆ ನೀಡಿ ನೇಮಕ ಮಾಡಿದೆ ಸದ್ಯ ಇವರು ಬೆಂಗಳೂರು ಏರ್ಪೋರ್ಟ್ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹಳ್ಳಿಯ ಮಕ್ಕಳು ಸಾಕಷ್ಟು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿದ್ದು ಓದಿನಲ್ಲೂ ಹಾಗೂ ಕ್ರೀಡೆ ಎರಡರಲ್ಲೂ ಮುಂಚೂಣಿಯಲ್ಲಿದ್ದಾರೆ ಆದರೆ ಅವರನ್ನು ಗುರುತಿಸುವ ಕೆಲಸ ಆಗುತ್ತಿಲ್ಲ ಹಳ್ಳಿಯಿಂದ ಬಂದ ನಾನು ಕ್ರೀಡೆಯಲ್ಲಿ ಒಂದಿಷ್ಟು ಸಾಧನೆ ಮಾಡಿ ಸರ್ಕಾರಿ ನೌಕರಿ ಪಡೆದಿರುತ್ತೇನೆ.



ಸರ್ಕಾರ ಹಳ್ಳಿಯಲ್ಲಿ ಹಾಕಿ ಕಲಿಯಲು ಇಚ್ಚಿಸುವ ಮಕ್ಕಳನ್ನು ಅವರ ಸದೃಢತೆ ಅನುಗುಣವಾಗಿ ಆಯ್ಕೆ ಮಾಡಿ ವಿಶೇಷ ತರಬೇತಿ ನೀಡಿದರೆ ರಾಷ್ಟ್ರಮಟ್ಟದಲ್ಲಿ ಪದಕ ತಂದುಕೊಡುವಲ್ಲಿ ಅನುಮಾನ ಪಡಬೇಕಾಗಿಲ್ಲ ಮುಂದುವರೆದು ಶಾಲಾ ಹಂತದಲ್ಲಿಯೇ ಹಾಕಿ ಕ್ರೀಡೆಯನ್ನು ಕಲಿಸಿದರೆ ದೈಹಿಕ ಸದೃಢತೆ ಹಾಗೂ ಉತ್ತಮ ಆರೋಗ್ಯ ಪಡೆದು ಕ್ರೀಡೆಯಲ್ಲಿ ಸಾಧನೆಯನ್ನು ಮಾಡಬಹುದು ಎಂದು ಹೇಳುತ್ತಾರೆ.

ಕ್ರೀಡಾ ಜೀವನದಲ್ಲಿ ನನಗೆ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡಿದ ದಿ.ಶರಣಗೌಡ ಬೇಲೇರಿ ಸರ್,ಸದಾ ನನಗೆ ಪ್ರೋತ್ಸಾಹ ನೀಡುವ ನನ್ನ ಪತಿ ಸತ್ಯಪ್ಪ ರವರು, ಎಲ್ಲಾ ಹಾಕಿ ತರಬೇತುದಾರರು,ಉದ್ಯೋಗ ನೀಡಿರುವ ನನ್ನ ಪೊಲೀಸ್ ಇಲಾಖೆ, ತಂದೆ, ತಾಯಿ,ಅಣ್ಣ ಬಾಳಪ್ಪ ಹಾಗೂ ಕುಟುಂಬದ ಎಲ್ಲ ವರ್ಗದವರಿಗೂ ನಾನು ಸದಾ ಚಿರಋಣಿ ಎನ್ನುತ್ತಾರೆ ಮಂಜುಳ ರವರು.

ಇಂತಹ ಕ್ರೀಡಾ ಸಾಧಕರನ್ನು ನೋಡಿ ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ ಹಳ್ಳಿಯಿಂದ ಬಂದ ಹೆಣ್ಣು ಮಗಳು ಇಷ್ಟೆಲ್ಲ ಸಾಧನೆ ಮಾಡಿದ್ದಾಳೆ ಎಂದರೆ ನಾವೆಲ್ಲರೂ ಒಂದಿಷ್ಟು ಮಕ್ಕಳನ್ನು ಆಟೋಟಗಳಲ್ಲಿ ಸೇರಿಸಿ ಅವರ ಆರೋಗ್ಯದ ಕಡೆಗೆ ಗಮನ ಹರಿಸಬೇಕಾಗಿದೆ ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಚಿಂತಿಸಿದರು ಪ್ರಯೋಜನವಾಗದು ಏನಂತೀರಿ!

### ಕ್ರೀಡಾ ಸಾಧನೆಗಳು

2016(ಮೈಸೂರು),2018(ಚಿದಂಬರಂ),2019(ಕಾರೈಕುಡಿ)ಸೌತ್ ಜೋನ್ ಇಂಟರ್ ಯೂನಿವರ್ಸಿಟಿ ಹಾಕಿ ಪಂದ್ಯಾವಳಿಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ ತಲಾ ಒಂದೊಂದು ಬೆಳ್ಳಿ ಪದಕ ಪಡೆದಿರುತ್ತಾರೆ.

2016(ಹರಿಯಾಣ),2018(ಕುರುಕ್ಷೇತ್ರ)ಆಲ್ ಇಂಡಿಯಾ ಇಂಟರ್ ಯುನಿವರ್ಸಿಟಿ ಹಾಕಿ ಟೂರ್ನಮೆಂಟ್ನಲ್ಲಿ ಭಾಗವಹಿಸಿರುತ್ತಾರೆ.

2012(ರಾಂಚಿ)ನ್ಯಾಷನಲ್ ರೂರಲ್ ಹಾಕಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿರುತ್ತಾರೆ.

2013(ಚಂಡಿಗಡ)58ನೇ ಎಸ್ ಜಿ ಎಫ್ ಐ ರಾಷ್ಟ್ರೀಯ ಹಾಕಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿರುತ್ತಾರೆ.

2015(ದೆಹಲಿ)60ನೇ ಎಸ್ ಜಿ ಎಫ್ ಐ ರಾಷ್ಟ್ರೀಯ ಹಾಕಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿರುತ್ತಾರೆ.

2015(ಚಂಡಿಗಢ)05ನೇ ಜೂನಿಯರ್ ನ್ಯಾಷನಲ್ ಹಾಕಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿರುತ್ತಾರೆ.

2016(ರಾಂಚಿ)06ನೇ ಜೂನಿಯರ್ ನ್ಯಾಷನಲ್ ಚಾಂಪಿಯನ್ಶಿಪ್ನಲ್ಲಿ ಭಾಗವಹಿಸಿರುತ್ತಾರೆ.

2017(ಹರಿಯಾಣ)07ನೇ ಸೀನಿಯರ್ ಹಾಕಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿರುತ್ತಾರೆ.

2018(ರಾಂಚಿ)08ನೇ ಹಾಕಿ ಇಂಡಿಯಾ ಸೀನಿಯರ್ ನ್ಯಾಷನಲ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿರುತ್ತಾರೆ.

ಆರ್‌ಸಿಹೆಚ್ ಅಧಿಕಾರಿ ಜಂಬಯ್ಯ. ಹೇಳಿಕೆ | ಲಸಿಕೆ ವಂಚಿತರಿಗೆ ವಿಶೇಷ ಲಸಿಕಾ ಅಭಿಯಾನಕ್ಕೆ ಚಾಲನೆ

## 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸಿ



■ ಹಂಪಿ ಟೈಮ್ಸ್ ಹೊಸಪೇಟೆ

ಮೇ.26 ರಿಂದ 31 ರವರೆಗೆ ಹಾಗೂ ಜೂ.23 ರಿಂದ 28 ರವರೆಗೆ ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ವಿಶೇಷ ಲಸಿಕೆ ಅಭಿಯಾನ ನಡೆಯಲಿದೆ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಜಂಬಯ್ಯ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಕಲ್ಲಹಳ್ಳಿ ಆರೋಗ್ಯ ಕ್ಷೇಮ ಕೇಂದ್ರದಲ್ಲಿ ವಿಶೇಷ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಸೋಮವಾರ ಮಾತನಾಡಿದರು, ಜಿಲ್ಲೆಯ ಎಲ್ಲಾ ಮಕ್ಕಳಿಗೆ ಲಸಿಕೆ ಹಾಕಿಸುವುದು ಕಡ್ಡಾಯವಾಗಿದೆ. ಅದರಲ್ಲೂ ಲಸಿಕೆ ವಂಚಿತ ಮಕ್ಕಳಿಗೆ ವಿಶೇಷ ಲಸಿಕಾ ಅಭಿಯಾನದ ಮೂಲಕ ಲಸಿಕೆಯನ್ನು ನೀಡಲಾಗುವುದು. ಪೋಷಕರು ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸಲು ಮುಂದಾಗಬೇಕು ಎಂದರು.

ಈ ವೇಳೆ ತಾಲೂಕು ಅರೋಗ್ಯ ಅಧಿಕಾರಿ ಡಾ.ವಿನೋದ, ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡಮನಿ, ಜಿಲ್ಲಾ ಅರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಲತಾ, ಸಮುದಾಯ ಅರೋಗ್ಯ ಅಧಿಕಾರಿ ನಂದಿನಿ ಸೇರಿದಂತೆ ಆರೋಗ್ಯ ಸಿಬ್ಬಂದಿಗಳು ಭಾಗವಹಿಸಿದ್ದರು.

## ವಿದ್ಯುತ್ ತಂತಿ ಬಿದ್ದು 4 ಮೇಕೆಗಳು ಬಲಿ



■ ಹಂಪಿ ಟೈಮ್ಸ್ ಕೂಡ್ಲಿಗಿ

ಹರಿದು ಬಿದ್ದ ವಿದ್ಯುತ್ ತಂತಿ ತಗುಲಿ 4 ಮೇಕೆಗಳು ಸಾವಿಗೀಡಾದ ಘಟನೆ ತಾಲೂಕಿನ ಗಂಡಬೊಮ್ಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನುಂಕನಹಳ್ಳಿ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ 12:30 ಸಮಯದಲ್ಲಿ ಸಂಭವಿಸಿದೆ.

ಗ್ರಾಮದ ಪಾಲಯ್ಯ ಎಂಬುವವರಿಗೆ ಸೇರಿದ್ದ ಮೇಕೆಗಳು ಹೊಲಗಳಲ್ಲಿ ಮೇಯಿಸುವಾಗ ಏಕಾಏಕಿ ವಿದ್ಯುತ್ ತಂತಿ ಹರಿದು ಮೇಲೆ ಬಿದ್ದಿದ್ದು ಮೇಕಿಗಳು ಸಾವನಪ್ಪಿವೆ. ಮೇಕೆಗಳು ವಿದ್ಯುತ್ ತಂತಿ ಕೆಳಗೆ ಮೇಯಿತ್ತಿರುವಾಗ ಮಳೆ ಗಾಳಿಯ ರಬಸಕ್ಕೆ ತಂತಿ ಕಟ್ ಆಗಿ ಬಿದ್ದಿದೆ. ಸಮೀಪದಲ್ಲೇ ಇದ್ದ ಪಾಲಯ್ಯ ಹಾಗೂ ಅವರ ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಂಬಂಧಿಸಿದ ಇಲಾಖೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತರಾದ ಪಾಲಯ್ಯ ಒತ್ತಾಯಿಸಿದರು. 40 ಸಾವಿರ ರೂ ಬೆಲೆ ಬಾಳುವ ಮೇಕೆಗಳು ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಗುಡೆಕೋಟೆ ಪೊಲೀಸರು, ಕೆಇಬಿ ಸೆಕ್ಷನ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಮೇ 28 ರಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಪ್ರಗತಿ ಪರಿಶೀಲನಾ ಸಭೆ

ಹಂಪಿ ಟೈಮ್ಸ್ ಬಳ್ಳಾರಿ

ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ಸಾರ್ವಜನಿಕ ಪ್ರದೇಶಗಳಲ್ಲಿ 'ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳ ಅಧಿನಿಯಮ(ಕೋಟ್ಪಾ)–2003' ರ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ಕುರಿತಂತೆ ಚರ್ಚಿಸಲು ಮೇ 28 ರಂದು ಸಂಜೆ 04 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ "ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಪ್ರಗತಿ ಪರಿಶೀಲನಾ ಸಭೆ" ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧ್ಯಕ್ಷರೂ ಆಗಿರುವ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ತಿಳಿಸಿದ್ದಾರೆ.

## ಪ್ಲಾಸ್ಟಿಕ್ ಮಾಲಿನ್ಯ ಕೊನೆಗೊಳಿಸಲು ಜಾಗೃತಿ

### ಜೂ.5 ರಂದು ವಿಶ್ವ ಪರಿಸರ ದಿನಾಚರಣೆ | ಜಿಪಂ ಸಿಇಒ ಮಹಮ್ಮದ್ ಹ್ಯಾರಿಸ್ ಸುಮೈರ್ ಸಲಹೆ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. "ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯವನ್ನು ಕೊನೆಗೊಳಿಸುವುದು" ಎಂಬ ಘೋಷವಾಕ್ಯ ದೊಂದಿಗೆ ಪ್ಲಾಸ್ಟಿಕ್ ಮಾಲಿನ್ಯ ವನ್ನು ಕೊನೆ ಗೊಳಿಸುವ ಮಹತ್ವವನ್ನು ತಿಳಿಸುವ ಉದ್ದೇಶ ದೊಂದಿಗೆ ಮೇ 22 ರಿಂದ ಜೂನ್ 05 ರವರೆಗೆ ಪೂರ್ವ ಅಭಿಯಾನವನ್ನು ಎಲ್ಲಾ ಗ್ರಾಮ ಪಂಚಾಯತಗಳಲ್ಲಿ ಹಮ್ಮಿಕೊಳ್ಳಲಾ ಗುವುದು ಎಂದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್ ಅವರು ತಿಳಿಸಿದ್ದಾರೆ.



ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯು ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಘನ ತ್ಯಾಜ್ಯ ನಿರ್ವಹಣಾ ಪ್ರಯತ್ನಗಳ ಪ್ರಮುಖ ಭಾಗವಾಗಿದ್ದು, ಈ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜೂನ್ 05 ರ ವರೆಗೆ ಜಾಗೃತಿ ಅಭಿಯಾನದಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ಆಗುವ ದುಷ್ಪರಿಣಾಮಗಳು ಹಾಗೂ ಇದರ ನಿರ್ಮೂಲನೆ ಮಾಡುವ ಸಂಬಂಧ ವಿವಿಧ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವಿವಿಧ ಕಾರ್ಯಕ್ರಮ/ಚಟುವಟಿಕೆ ಶ್ರಮದಾನ, ಸಂವಾದ ಸಭೆಗಳನ್ನು ಆಯೋಜನೆ ಮಾಡಿ ಜನರಲ್ಲಿ ಜಾಗೃತಿ ಮೂಡಿಸು ವುದಾಗಿದೆ.

ಈ ಅಭಿಯಾನದಲ್ಲಿ ವಿಶೇಷವಾಗಿ ಜಲಮೂಲ ಗಳ ಸುತ್ತು– ಮುತ್ತ ಸ್ವಚ್ಚಗೊಳಿಸುವುದು. ಗ್ರಾಮ ದಲ್ಲಿ ಬ್ಲಾಕ್ ಸ್ಪಾಟ್ (ಕಸ ಎಸೆಯುವ ಸ್ಥಳ) ಗುರುತಿಸಿ ಸ್ವಚ್ಚಗೊಳಿಸುವುದು. ಚರಂಡಿ ಸ್ವಚ್ಛಗೊಳಿ ಸುವುದು, ಅದರಲ್ಲಿ ಪ್ಲಾಸ್ಟಿಕ್ ಮತ್ತು ಇತರೆ ವಸ್ತುಗಳನ್ನು ಎಸೆಯದಂತೆ ತಿಳಿಸುವುದು. ಏಕ ಬಳಕೆಯ ಪ್ಲಾಸ್ಟಿಕ್ ವಸ್ತು, ಕವರ್ ಗಳನ್ನು ಉತ್ಪಾದಿಸುವ, ಮಾರಾಟ ಮಾಡುವ, ಗ್ರಾಹಕರಿಗೆ ನೀಡುವ ಅಂಗಡಿ ಹೊಟೇಲ್, ಬೇಕರಿ, ಇತರೆ ವಾಣಿಜ್ಯ ಮಳಿಗೆಗಳಿಗೆ ತಪಾಸಣೆ ಮಾಡುವುದು.

ಬಳಕೆಯಾದ ಪ್ಲಾಸ್ಟಿಕ್ ವಸ್ತುಗಳನ್ನು ಸೂಕ್ತ ವಿಲೇವಾರಿ ಮಾಡುವುಂತೆ ಪ್ರೇರೆಣೆ, ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣೆಯ ಮಾಡಿ ವಿಂಗಡಿಸಿ ವೈಜ್ಞಾನಿಕ ವಿಲೇವಾರಿ ಮಾಡುವುದಾಗಿದೆ.

ಅಭಿಯಾನದಲ್ಲಿ ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು, ಯುವಕರು, ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು ಮತ್ತು ಸ್ವಯಂ ಸೇವಕರು, ಗ್ರಾಮದ ಮುಖಂಡರು ಅಭಿಯಾನದಲ್ಲಿ ಭಾಗವಹಿಸಿ ಪ್ಲಾಸ್ಟಿಕ್ ಮುಕ್ತ ಗ್ರಾಮಗಳನ್ನಾಗಿ ರೂಪಿಸಲು ಸಹಕರಿಸಲು ಅವರು ಮನವಿ ಮಾಡಿದ್ದಾರೆ.

## ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಕುಕನೂರು ಹಾಗೂ ಗಂಗಾವತಿಯಲ್ಲಿ ಖಾಲಿ ಇರುವ ತಜ್ಞವೈದ್ಯರು ಹಾಗೂ ಶುಶ್ರೂಷಕ ಅಧಿಕಾರಿಗಳ ಹುದ್ದೆಗಳ ಅರ್ಹತಾ ಪಟ್ಟಿ, ತಿರಸ್ಕೃತ ಪಟ್ಟಿ ಹಾಗೂ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಅರ್ಹತಾ ಪಟ್ಟಿ, ತಿರಸ್ಕೃತ ಪಟ್ಟಿ ಹಾಗೂ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಚೇರಿಯ ಸೂಚನಾ ಫಲಕ ಹಾಗೂ ಜಿಲ್ಲಾ ವೆಬ್‌ಸೈಟ್ www.koppal.nic.in ನಲ್ಲಿ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಪಟ್ಟಿಯನ್ನು ಪರಿಶೀಲಿಸಿ ಮೇ 27 ರಿಂದ ಜೂನ್ 05 ರೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬಂದ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ ಅವರು ತಿಳಿಸಿದ್ದಾರೆ.

## ಭಾರತವನ್ನು ಜಾಗತಿಕ ಕೇಂದ್ರವನ್ನಾಗಿ ಮಾಡುವಲ್ಲಿ ಕೃಷಿ ವಿದ್ಯಾರ್ಥಿಗಳ ಪಾತ್ರ ಪ್ರಮುಖ

ಎರಡನೆ ಪುಟದಿಂದ

ಮಣ್ಣಿನ ಸವೆತ, ಅತಿಯಾದ ಕೀಟನಾಶಕಗಳ ಬಳಕೆ ಮತ್ತು ರೈತರ ಆರ್ಥಿಕ ತೊಂದರೆಗಳಂತಹ ಸವಾಲುಗಳನ್ನು ಎದುರಿಸುತ್ತಿದ್ದೇವೆ. ಅಂತಹ ಪರಿಸ್ಥಿತಿಯಲ್ಲಿ ನಿಮ್ಮಂತಹ ಕೃಷಿ ವಿಜ್ಞಾನಿಗಳು, ನಾವೀನ್ಯಕಾರರು ಮತ್ತು ನೀತಿ ನಿರೂಪಕರ ಪಾತ್ರ ಇನ್ನಷ್ಟು ಮುಖ್ಯವಾಗುತ್ತದೆ. ಇಂದು ಕೃಷಿಯು ದತ್ತಾಂಶ ವಿಶ್ಲೇಷಣೆ, ಡ್ರೋನ್ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯಂತಹ ಮುಂದುವರಿದ ತಂತ್ರಜ್ಞಾನಗಳೊಂದಿಗೆ ಸಂಯೋಜಿಸಲ್ಪಟ್ಟಿದೆ. "ಸ್ಮಾರ್ಟ್ ಅಗ್ರಿಕಲ್ಚರ್" ಎಂಬ ಪರಿಕಲ್ಪನೆಯು ಈಗ ರೂಪ ಪಡೆಯುತ್ತಿದೆ. ಇದರಲ್ಲಿ ಯುವಕರ ಭಾಗವಹಿಸುವಿಕೆಯಿಂದ ಇದು ಸಾಧ್ಯವಾಗುತ್ತಿದೆ. ಕೃಷಿ ಉತ್ಪಾದನೆಯ ಬೇಡಿಕೆಯನ್ನು ಪೂರೈಸಲು ಹೊಸ ಪರ್ಯಾಯಗಳನ್ನು ಉತ್ತೇಜಿಸುವ ಅವಶ್ಯಕ 'ತೆಯಿದೆ. ಕಡಿಮೆ ಭೂಮಿಯಲ್ಲಿ ಹೆಚ್ಚಿನ ಇಳುವರಿ ನೀಡಲು ಲಂಬ ಕೃಷಿ ತಂತ್ರಗಳ ಕುರಿತು ಹೆಚ್ಚಿನ ಕೆಲಸ ಮಾಡಬೇಕಾಗಿದೆ ಎಂದು ತಿಳಿಸಿದರು. ಈ ವೇಳೆ ಕೃಷಿ ಸಚಿವರಾದ ಎನ್.ಚೆಲುವರಾಯಸ್ವಾಮಿ ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್ HAMPI TIMES
ಮಂಗಳವಾರ/Tuesday 27.05.2025
ವಿಜಯನಗರ



ಅರಿದೆಡೆ ಶರಣ
ದಿನಾಂಕ: 26-05-2025
ಸೋಮವಾರ ರಾತ್ರಿ
ಶ್ರೀ ಶನೇಶ್ವರ ದೇವರ ಪುರಾಣ
ಪ್ರವಚನ, ಭಜನೆ

ಶ್ರೀ ಶನೇಶ್ವರಸ್ವಾಮಿ ಜಯಂತಿ
ದಿನಾಂಕ: 27-05-2025 ಮಂಗಳವಾರ ಬೆಳಿಗ್ಗೆ 5-00 ಕ್ಕೆ ಗಂಗಾಪೂಜೆ,
ಬೆಳಿಗ್ಗೆ 6.00 ಗಂಟೆಗೆ ದೇವಸ್ಥಾನದಲ್ಲಿ ರುದ್ರಾಭಿಷೇಕ, ವಿಶೇಷ ಪೂಜೆ, ತೈಲಾಭಿಷೇಕ, ಪುಷ್ಪಲಂಕಾರ

ಮರೆತರೆ ಮಾನವ
7090966698
9448795049
7019370389
9481342032



ಪೂಜಾ ಸೇವಾ ವಿವರ : ನಿರಂತರ ಪೂಜೆ | ನವಗ್ರಹ ಶಾಂತಿ ಪೂಜೆ | ಸರ್ವಸೇವೆ ಪೂಜೆ | ರುದ್ರಾಭಿಷೇಕ | ಎಲೆ ಪೂಜೆ | ತೈಲಾಭಿಷೇಕ | ಪಂಚಾಮೃತಾಭಿಷೇಕ
ಶ್ರೀ ಕ್ಷೇತ್ರ ಶನೇಶ್ವರ ದೇವಸ್ಥಾನ ಸಮಿತಿ (ರಿ) ರಾಷ್ಟ್ರೀಯ ಹೆದ್ದಾರಿ ನಂ.50, 13ನೇ ವಾರ್ಡ್, ಪಂಚಾಚಾರ್ಯ ನಗರ, ಟಿ.ಬಿ.ಡ್ಯಾಂ, ಹೊಸಪೇಟೆ-583225



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 26–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.25 ಅಡಿ |
| ಒಳ ಹರಿವು | 6595 ಕ್ಯುಸೆಕ್ |
| ಹೊರ ಹರಿವು | 302 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.243 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.44 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.353 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

27–05–2025 – ಮಂಗಳವಾರ

| | |
|---|---|
| ತಿಥಿ | :ಅಮವಾಸ್ಯೆ/ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೋಹಿಣೀ |
| ಯೋಗ | : ಸುಕರ್ಮ |
| ಕರಣ | : ನಾಗವ |
| ಸೂರ್ಯೋದಯ | : 05:43:02 |
| ಸೂರ್ಯಾಸ್ತ | : 19:05:26 |
| ರಾಹು ಕಾಲ | : 15:45–17:25 |
| ಯಮಘಂಡ ಕಾಲ | : 09:04–10:44 |
| ಗುಳಿಕ ಕಾಲ | : 12:24–14:05 |

### ಮೈಕ್ರೋ ನ್ಯೂಸ್

## ದೋಣಿಮಲೈ: ನಾಳೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಸಂಡೂರು**

ಸಂಡೂರು ಜೆಸ್ಕಾಂ ವ್ಯಾಪ್ತಿಯ 110/33/11ಕೆ.ವಿ ದೋಣಿಮಲೈ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಬ್ಯಾಟರಿ ಮೆಂಟೆನೆನ್ಸ್ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 28 ರಂದು ಮಧ್ಯಾಹ್ನ 2 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸಂಡೂರು ಪಟ್ಟಣ ಸೇರಿದಂತೆ ಕೃಷ್ಣನಗರ ಗ್ರಾಮಪಂಚಾಯಿತಿ, ಸುಶೀಲಾನಗರ ಗ್ರಾಮ ಪಂಚಾಯಿತಿ, ಯಶವಂತನಗರ ಐಪಿಸೆಟ್ ಹಾಗೂ ಸಂಡೂರು ಪಟ್ಟಣದ ಸೀನ್ ಬಸಪ್ಪ ಕ್ಯಾಂಪ್, ನಂದಿಹಳ್ಳಿ, ಕಮತೂರು ನಾರಾಯಣ ಪುರ ಮತ್ತು ರಣಜಿತ್‌ಪುರ, ಭುಜಂಗನಗರ ಗ್ರಾಮ ಪಂಚಾಯತಿ, ದೇವಗಿರಿ ಗ್ರಾಮಪಂಚಾಯಿತಿ, ನರಸಿಂಗಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಪಂಚಾಯತಿಗಳಿಗೆ ಬರುವ ಗ್ರಾಮಗಳಲ್ಲಿ ಎನ್.ಜೆ.ವೈ ಮತ್ತು ಐ.ಪಿ.ಸೆಟ್ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯವಾಗಲಿದೆ ಎಂದು ಸಂಡೂರು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ-ವಿಭಾಗದ ಎಇಇ ತಿಳಿಸಿದ್ದಾರೆ.

REACH
your Customers with us!
Call us for
PRINT & DIGITAL
Advertisements
Effective, affordable
and everywhere
your customers are!
94486
33038
HAMPI TIMES - VIJAYANAGARA

### ಕೃಷಿ ಆಯುಕ್ತ ವೈ.ಎಸ್.ಪಾಟೀಲ್ ಸೂಚನೆ । ಕಲಬುರಗಿ ವಿಭಾಗದ ಪ್ರಗತಿ ಪರಿಶೀಲನಾ ಸಭೆ

# ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಪೂರೈಸಿ



**ಹಂಪಿ ಟೈಮ್ಸ್ ರಾಯಚೂರು**

ಕಲ್ಯಾಣ ಕರ್ನಾಟಕ ಭಾಗದ ರೈತರ ಅವಶ್ಯಕತೆಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳನ್ನು ಪೂರೈಕೆ ಮಾಡಬೇಕು ಎಂದು ಕೃಷಿ ಇಲಾಖೆಯ ಆಯುಕ್ತರಾದ ವೈ.ಎಸ್.ಪಾಟೀಲ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೇ.26ರಂದು ಸೋಮವಾರ ನಗರದ ಕೃಷಿ ವಿವಿಯ ಆಡಳಿತ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಲಬುರಗಿ ವಿಭಾಗದ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಮುಂಗಾರು ಮಳೆ ಉತ್ತಮವಾಗಿದ್ದು, ಮುಂದಿನ ದಿನಗಳಲ್ಲಿ ಕೃಷಿ ಚಟುವಟಿಕೆಗಳು ಗರಿಗೆದರಿವೆ. ರೈತರಿಗೆ ಅಗತ್ಯವಿರುವ ಉತ್ತಮ ಗುಣಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ವಿತರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಯಾವುದೇ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಬಿತ್ತನೆ ಬೀಜ, ರಸಗೊಬ್ಬರಗಳ ಕೃತಕ ಅಭಾವ ಸೃಷ್ಟಿಸಿದರೆ ಅಥವಾ ಸರ್ಕಾರ ನಿಗದಿ ಪಡಿಸಿದ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ, ಅಂಥವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗೊಬ್ಬರ ಮಾರಾಟ ಕೇಂದ್ರಗಳಲ್ಲಿ ಗೊಬ್ಬರದ ದರಗಳನ್ನು ಫಲಕದಲ್ಲಿ ಪ್ರದರ್ಶಿಸಬೇಕು ಎಂದರು.

ಹೋಬಳಿ ಮಟ್ಟದ ಎಲ್ಲ ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜ, ಗೊಬ್ಬರ ಮತ್ತಿತರ ಪರಿಕರಗಳನ್ನು ರಿಯಾಯಿತಿ ದರದಲ್ಲಿ ವಿತರಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿತ್ತನೆ ಬೀಜ ರಸಗೊಬ್ಬರ ಹಾಗೂ ಮತ್ತಿತರ ಪರಿಕರಗಳ ದಾಸ್ತಾನುಗಳ ಬಗ್ಗೆ ರೈತರಿಗೆ ತಿಳಿಸಬೇಕು. ಈ ಬಗ್ಗೆ ಹೆಚ್ಚಿನ ಮಟ್ಟದದಲ್ಲಿ ಪ್ರಚಾರಕ್ಕೈಗೊಳ್ಳಬೇಕು. ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲೆಯ ವಿವಿಧ ಕಡೆ ನಿರಂತರ ಭೇಟಿ ನೀಡಿ ಪರಿಶೀಲನೆ ಮಾಡಬೇಕೆಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಜಲಾನಯನ ಆಯುಕ್ತರಾದ ಮಹೇಶ್ ಬಿ.ಶಿರೂರ್, ಕೃಷಿ ನಿರ್ದೇಶಕರಾದ ಜಿ.ಟಿ.ಪುತ್ರ, ರಾಜ್ಯ ಸಕೆಂಡರಿ ಕೃಷಿ ನಿರ್ದೇಶಕರಾದ ವೆಂಕಟರಾಮರೆಡ್ಡಿ ಜೆ. ಪಾಟೀಲ್, ಕರ್ನಾಟಕ ರಾಜ್ಯ ಬೀಜ ನಿಯಮಿತದ ವ್ಯವಸ್ಥಾಪನ ನಿರ್ದೇಶಕರಾದ ಅನೂಪ್ ಕೆ.ಜಿ, ಅಪರ ಕೃಷಿ ನಿರ್ದೇಶಕರಾದ ಆಂಥೋನಿ, ಕರ್ನಾಟಕ ಬೀಜ ಮತ್ತು ಸಾವಯವ ಅಪರ ಕೃಷಿ ನಿರ್ದೇಶಕರಾದ ಸದಾಶಿವ, ರಾಯಚೂರು ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಜಯಪ್ರಕಾಶ್ ಟಿ.ಸಿ, ರಾಯಚೂರು ಜಿಲ್ಲೆಯ ವಿವಿಧ ತಾಲೂಕಿನ ಕೃಷಿ ಅಧಿಕಾರಿಗಳಾದ ದೀಪಾ, ಶ್ರೀನಿವಾಸ್, ಗುರುನಾಥ, ನಜೀರ್ ಅಹಮ್ಮದ್, ಮಲ್ಲಿಕಾರ್ಜುನ ಸೇರಿದಂತೆ ವಿವಿಧ ಜಿಲ್ಲೆಯ ಜಂಟಿ ನಿರ್ದೇಶಕರು ಇದ್ದರು.



# ಮೇ.27ರಿಂದ ಪೌರಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ



**ಹಂಪಿ ಟೈಮ್ಸ್ ಕೊಟ್ಟೂರು**

ರಾಜ್ಯ ಸರಕಾರಿ ನೌಕರರೆಂದು ಪರಿಗಣಿಸುವುದು ಸೇರಿದಂತೆ 19 ಬೇಡಿಕೆಗಳನ್ನು ಈಡೇರಿಸುವಂತೆ ಹಲವು ಬಾರಿ ಸರಕಾರಕ್ಕೆ ಮನವಿ ಮಾಡಿದ್ದರೂ ಸ್ಪಂದಿಸದ ಹಿನ್ನಲೆಯಲ್ಲಿ ನೀರು ಸರಬರಾಜು ಹೊರತುಪಡಿಸಿ ಉಳಿದೆಲ್ಲಾ ಸೇವೆಗಳನ್ನು ಬಂದ್ ಮಾಡಿ ಮೇ.27ರಿಂದ ಅನಿರ್ಧಿಷ್ಟಾವಧಿ ಮುಷ್ಕರ ಕೈಗೊಳ್ಳಲಾಗುವುದು ಎಂದು ರಾಜ್ಯ ಪೌರ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಂ.ಕೊಟ್ರೇಶ್ ಹೇಳಿದರು.

ಪಟ್ಟಣದಲ್ಲಿ ಈ ಕುರಿತು ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದರು. ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ತೀರ್ಮಾನಿಸಿದಂತೆ ಹಾಗೂ ಮೊದಲೇ ಸರಕಾರಕ್ಕೆ ತಿಳಿಸಿದಂತೆ ಈ ಮುಷ್ಕರವನ್ನು ರಾಜ್ಯಾದ್ಯಂತ ನಡೆಸಲಾಗುತ್ತಿದೆ. ಮಾ.27ರಂದು ಒಂದು ದಿನದ ದರಣಿ ನಡೆಸಿದ್ದ ಸಂದರ್ಭದಲ್ಲಿ ಸಚಿವ ರಹೀಮ್‌ಖಾನ್ರು ದೂರವಾಣಿ ಮೂಲಕ ರಾಜ್ಯ ಸಂಘದವರೊಂದಿಗೆ ಮಾತನಾಡಿ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದರು. ನಂತರದಲ್ಲಿ ಬೇರೆ ಬೇರೆ ದಿನಗಳಲ್ಲಿ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸುತ್ತಾ ಪ್ರತಿಭಟನೆ ಮಾಡಲಾಗಿತ್ತು. ಮೇ.26ರಂದು ಲೇಖನಿ ಸ್ಥಗಿತಗೊಳಿಸಿ ಮುಷ್ಕರ ನಡೆಸಿದ್ದೇವೆ. ಆದರೂ ಸರಕಾರ ನಮ್ಮನ್ನು ನಿರ್ಲಕ್ಷ ಮಾಡಿದೆ ಎಂದು ದೂರಿದರು.

ಸ್ಥಳೀಯ ಸಂಸ್ಥೆ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸುವುದು, ಹೊರಗುತ್ತಿಗೆ ಆಧಾರದ ಮೇಲಿನ ಕೆಲಸ ಮಾಡುವ ನೌಕರರನ್ನು ನೇರ ಪಾವತಿಗೆ ಒಳಪಡಿಸಬೇಕು. ಖಾಲಿ ಇರುವ ನೌಕರರ ಹುದ್ದೆಗಳಿಗೆ ನೇಮಕಾತಿ, ಘನತ್ಯಾಜ್ಯ ನಿರ್ವಹಣೆ ವಾಹನಗಳಿಗೆ ಚಾಲಕರ ಹುದ್ದೆಗಳನ್ನು ಮಂಜೂರು ಮಾಡುವುದು, ಖಾಯಂ ಅಕೌಂಟೆಂಟ್ ಹುದ್ದೆ ಸೃಜನೆ, ಸಮುದಾಯ ಸಂಘಟನಾಧಿಕಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರರ, ಮೆಕಾನಿಕಲ್ ಇಂಜಿನಿಯರ್ ಹುದ್ದೆ ಸೃಜಸುವುದು ಸೇರಿ ಇತರೆ 19 ಬೇಡಿಕೆಗಳನ್ನು ಈಡೇರಿಸಲು ಸರಕಾರಕ್ಕೆ ಒತ್ತಾಯಿಸುತ್ತಿದ್ದೇವೆ. ಸ್ವಚ್ಛತೆ, ಕಸ ವಿಲೇವಾರಿ, ಕಚೇರಿ ಕೆಲಸಗಳು ಸೇರಿ ಎಲ್ಲ ಸೇವೆಗಳನ್ನು ಸ್ಥಗಿತಗೊಳಿಸಿ ಅನಿರ್ಧಿಷ್ಟಾವಧಿ ಕಾಲ ಮುಷ್ಕರ ನಡೆಸುವ ಬಗ್ಗೆ ಪಪಂ ಮುಖ್ಯಾಧಿರಿ ಎ.ನಸುರುಲ್ಲಾ ಅವರಿಗೆ ಮನವಿ ಪತ್ರ ಕೊಟ್ಟು ಸಹಕರಿಸುವಂತೆ ಕೋರಲಾಗಿದೆ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷ ಎಚ್.ಶಂಕ್ರಪ್ಪ, ಖಜಾಂಚಿ ಎಸ್.ಪರುಸಪ್ಪ, ಕಾರ್ಯದರ್ಶಿ ಎ.ಮಂಜುನಾಥ, ಸಂಘಟನಾ ಕಾರ್ಯದರ್ಶಿ ಎನ್.ವಿಜಯಕುಮಾರ, ನಿರ್ದೇಶಕರಾದ ಸುಭದ್ರಮ್ಮ, ಬಿ.ರವಿ, ಸುಮಿತ್ರಮ್ಮ, ಬಿ.ರಮೇಶ ಇತರರು ಇದ್ದರು.

### ನೀರು ಪೂರೈಕೆ ಇರುತ್ತೆ, ಇನ್ನುಳಿದ ಪೌರಕಾರ್ಮಿಕರ ಕೆಲಸಗಳು ಸ್ಥಗಿತ

# ಇಂದಿನಿಂದ ಅನಿರ್ದಿಷ್ಟಾವಧಿ ಮುಷ್ಕರ



**ಹಂಪಿ ಟೈಮ್ಸ್ ಹರಪನಹಳ್ಳಿ**

ವಿವಿಧ ಬೇಡಿಕೆ ಈಡೇರಿಸಲು ಪುರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ನೌಕರರು ಸರಕಾರಕ್ಕೆ ನೀಡಿದ ಮೇ 26ಕ್ಕೆ ಕೊನೆಗೊಳ್ಳಲಿದ್ದು, ಕಚೇರಿ ಹಾಗೂ ಇತರೆ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಮೇ 27ರಿಂದ ಅನಿರ್ದಷ್ಟಾವಧಿ ಮುಷ್ಕರ ನಡೆಸಲು ಮುಂದಾಗಿದ್ದಾರೆ.

ಏ.12 ರಿಂದ ಮೇ. 26 ವರೆಗೆ ಪೌರ ನೌಕರರು ಬಲಗೈಗೆ ಕಪ್ಪು ಬಟ್ಟೆ ಧರಿಸಿ 45 ದಿನಗಳ ಕಾಲ ಮುಷ್ಕರವನ್ನು ನಡೆಸುತ್ತಾ ಬಂದಿದ್ದಾರೆ. ಆದರೆ ಸರಕಾರ ಇವರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಇದೀಗ ಈ ಮುಷ್ಕರ ಅಂತ್ಯಗೊಳ್ಳಲಿದ್ದು, ನೀರು ಸರಬರಾಜು ಹೊರತುಪಡಿಸಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಅಣಿಯಾಗಿದ್ದಾರೆ.

2023ನೇ ಸಾಲಿನಲ್ಲಿ ವಿಶೇಷ ನೇಮಕಾತಿ ಹೊಂದಿರುವ ಪೌರಕಾರ್ಮಿಕರು ನೌಕರರ ಸ್ಥಳೀಯ ನಿಧಿಯಲ್ಲಿ ವೇತನ ನೀಡುವುದನ್ನು ರದ್ದುಪಡಿಸಿ ಎಸ್.ಎಫ್.ಸಿ ಅನುದಾನದಲ್ಲಿ ವೇತನ ಮಂಜೂರು ಮಾಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪೌರ ನೌಕರರ ಸರಕಾರಕ್ಕೆ 45 ದಿನಗಳ ಗಡವು ನೀಡಿದ್ದರು. ಸರಕಾರ ಈವರೆಗೂ ಪೌರ ನೌಕರರ ಬೇಡಿಕೆ ಈಡೇರಿಕೆಗೆ ಮುಂದೆ ಬಂದಿಲ್ಲ. ಈ ಹಿನ್ನಲೆಯಲ್ಲಿ ಪಟ್ಟಣದ ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವುಕುಮಾರ್ ಅವರಿಗೆ ಪೌರ ನೌಕರರು, ಕಛೇರಿ ಕೆಲಸ, ಸ್ವಚ್ಚಾತೆ ಕಾರ್ಯ, ನೀರು ಸರಬರಾಜು ಹಾಗೂ ಬೀದಿ ದೀಪ ನಿರ್ವಹಣೆಯನ್ನು ಸ್ಥಗಿತಗೋಳಿಸಿ,ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಬೇಡಿಕೆಗಳು :– ಪೌರ ವೃಂದದ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸಬೇಕು. ಕೆ.ಜಿಐಡಿ, ಜಿಪಿಎಸ್ ಜ್ಯೋತಿ ಸಂಜೀವಿನಿ ಸೇರಿದಂತೆ ಸರಕಾರಿ ನೌಕರರಿಗೆ ಸಿಗುವ ಇತರೆ ಸೌಲಭ್ಯಗಳನ್ನು ಪೌರ ನೌಕರರಿಗೂ ಜಾರಿ ಮಾಡಬೇಕು. ನೀರು ಸರಬರಾಜು ಸಿಬ್ಬಂದಿ, ಲೋಡರ್, ಕ್ಲೀನರ್, ಪೌರಕಾರ್ಮಿಕರು, ಸೂಪರ್ ವೈಸರ್, ಕಂಪ್ಯೂಟರ್ ಆಪರೇಟರ್, ಸೇರಿದಂತೆ ಗುತ್ತಿಗೆ ಹೊರಗುತ್ತಿಗೆ ಮೂಲಕ ಕಾರ್ಯನಿರ್ವಹಿಸುತ್ತಿರುವ ಜೂನಿಯರ್ ಸಿಬ್ಬಂದಿಗೂ ವೇತನ ಪಾವತಿ ಮಾಡಿ ಖಾಯಂ ಮಾಡಬೇಕು.

ಈ ವೇಳೆ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಬಿ.ನಾಗರಾಜ, ವ್ಯವಸ್ಥಾಪಕ ಅಶೋಕ, ಇಂಜಿನಿಯರ್ ಸಿದ್ದೇಶ್ವರಸ್ವಾಮಿ, ಆರ್.ಓ. ಪ್ರಭು, ಮಲ್ಲಮ್ಮ, ಶ್ಯಾಮರಾಜ್, ಸಂತೋಷ, ಉಚ್ಚಂಗ್ಯಪ್ಪ, ಗುರು, ರಮೇಶ್, ಬಂಡಿರಾಮ ಸೇರಿದಂತೆ ಆನೇಕರು ಹಾಜರಿದ್ದರು.

# ಡೆಂಗ್ಯೂಗೆ ಲಸಿಕೆ ಇಲ್ಲ, ತಡೆಗೆ ಮುನ್ನೆಚ್ಚರಿಕೆಯೊಂದೆ ಮಾರ್ಗ

ಮೊದಲ ಪುಟದಿಂದ

ಸುಲಭವಾಗಲಿದೆ ಎಂದರು. ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಜಂಬಯ್ಯ ಅವರು ಮಾತನಾಡಿ, ಪ್ರತಿಯೊಬ್ಬರು ಮನೆಗಳ ಸುತ್ತಮುತ್ತಲಿನ ವಾತವಾರಣವನ್ನು ನೈರ್ಮಲ್ಯತೆ ಯಿಂದ ಕಾಪಾಡಿಕೊಳ್ಳಬೇಕಿದೆ. ಮನೆಯಲ್ಲಿ ಮಲಗುವಾಗ ಸೊಳ್ಳೆ ಪರದೆಗಳನ್ನು ಬಳಸಿ. ಮನೆಯಲ್ಲಿನ ಮಕ್ಕಳನ್ನು, ಹಿರಿಯ ನಾಗರೀಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಿದೆ ಎಂದರು.

Scan For Digital Colourful
HAMPI TIMES E-paper

ಇದೇ ವೇಳೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸುವ ಮೂಲಕ ಡೆಂಗ್ಯೂ ಕುರಿತು ಜಾಗೃತಿ ಮೂಡಿಸಲಾಯಿತು. ಡೆಂಗ್ಯೂ ನಿಯಂತ್ರಣ ಕ್ರಮಗಳ ಕುರಿತು ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ನಗರಸಭೆ ಆಯುಕ್ತ ಚಂದ್ರಪ್ಪ, ಜಿಲ್ಲಾ ಕ್ಷಯರೋಗ ನಿರ್ಮೂಲನ ಅಧಿಕಾರಿ ಡಾ.ಭಾಸ್ಕರ್, ತಾಲೂಕು ಆರೋಗ್ಯ ಅಧಿಕಾರಿ ಡಾ.ವಿನೋದ ಕುಮಾರ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ, ಜಿಲ್ಲಾ ಕುಷ್ಠರೋಗದ ನಿಯಂತ್ರಣಾಧಿಕಾರಿ ಡಾ.ರಾಧಿಕಾ, ಕೀಟಶಾಸ್ತ್ರಜ್ಞೆ ನಂದಾ ಖಿಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಶ್ರೀಸಪ್ತಗಿರಿ ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು, ಆರೋಗ್ಯ ಸಿಬ್ಬಂದಿಗಳು ಹಾಜರಿದ್ದರು.

# ಅಂಜನಾದ್ರಿ ಅಭಿವೃದ್ಧಿಗೆ 100 ಕೋಟಿ ರೂ ಅನುದಾನ ಬಿಡುಗಡೆ – ಜಿಲ್ಲಾಧಿಕಾರಿ ನಲಿನ್ ಅತುಲ್

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಗೆ ಹೆಚ್ಚಿನ ಆದ್ಯತೆ ನೀಡಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಬಳಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಕುರಿತು ಕರೆದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕೊಪ್ಪಳ ಜಿಲ್ಲೆಯು ಐತಿಹಾಸಿಕ ಪ್ರವಾಸಿ ತಾಣಗಳನ್ನು ಹೊಂದಿದ್ದು, ಜಿಲ್ಲೆಯ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಬೇಕು. ಬ್ರ್ಯಾಂಡ್ ಕೊಪ್ಪಳ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಗೆ ದೇಶಿಯ ಮತ್ತು ವಿದೇಶಿಯ ಪ್ರವಾಸಿಗರನ್ನು ಸೆಳೆಯುವ ಕೆಲಸವಾಗಬೇಕು. ಈ ಬಗ್ಗೆ ಜಿಲ್ಲೆಯ ಐತಿಹಾಸಿಕ ತಾಣಗಳನ್ನು ಸುಪ್ರಸಿದ್ಧ ಧಾರ್ಮಿಕ ಮತ್ತು ಐತಿಹಾಸಿಕ ಕ್ಷೇತ್ರಗಳಾದ ಹುಲಿಗಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಸಮಗ್ರ ಅಭಿವೃದ್ಧಿ, ಕನಕಗಿರಿಯ ಶ್ರೀ ಕನಕಾಚಲಪತಿ ದೇವಸ್ಥಾನದ ಅಭಿವೃದ್ಧಿ, ಹಿರೇಬೇಣಕಲ್ ಗ್ರಾಮದ ಮೋರೆರ್ ಬೆಟ್ಟದ ಅಭಿವೃದ್ಧಿ, ಇಟಗಿಯ ಮಹಾದೇವ ಕೊಪ್ಪಳ ಕೋಟೆ, ಹುಲಿಕೆರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಕೊಪ್ಪಳ ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಬಳಿ ಕೈಗೊಂಡಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಗೆ ಹೆಚ್ಚಿನ ಆದ್ಯತೆ ನೀಡಿ ಎಂದರು.



ರೂ. 100 ಕೋಟಿ ಅನುದಾನದಲ್ಲಿ ಅಂಜನಾದ್ರಿಯಲ್ಲಿ ಪ್ರವಾಸಿ ಮಂದಿರ ನಿರ್ಮಾಣ, ಶಾಪಿಂಗ್ ಕಾಂಪ್ಲೆಕ್ಸ್ ಶೌಚಾಲಯ ನಿರ್ಮಾಣ, ಪ್ರದಕ್ಷಿಣಾ ಪಥ ಹಾಗೂ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಎಲ್ಲಾ ಕಾಮಗಾರಿಗಳ ಪ್ರಗತಿಗೆ ವೇಗ ನೀಡಬೇಕು. ಇದರ ಜೊತೆಗೆ ಇತರೆ ಕಾಮಗಾರಿಗಳಿಗೆ ಸರ್ಕಾರವು ಮತ್ತೆ ರೂ. 100 ಕೋಟಿ ಅನುದಾನ ನೀಡಿದ್ದು, ಯೋಜನಾ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಬಳಿಕ ಹೊಸ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕ್ರಮ ವಹಿಸಬೇಕು. ಒಂದು ಜಿಲ್ಲೆ–ಒಂದು ತಾಣ ಯೋಜನೆ ಅಡಿಯಲ್ಲಿ ಶ್ರೀ ಇಟಗಿ ಮಹಾದೇವ ದೇವಾಲಯವನ್ನು ಸಾರ್ವಜನಿಕ ಸಹಭಾಗಿತ್ವ ಮಾದರಿಯಲ್ಲಿ(ಪಿಪಿಪಿ) ಸಮಗ್ರ ಅಭಿವೃದ್ಧಿ ಮಾಡಬೇಕು. ಯೋಜನಾ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಅಧಿಕಾರಿಗಳು ಹಾಗೂ ಕಾಮಗಾರಿಗಳ ಅನುಷ್ಠಾನ ಏಜೆನ್ಸಿಯವರು ಉಪಸ್ಥಿತರಿದ್ದರು.